ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಏಪ್ರಿಲ್ 01, 2021

ಸಂಪುಟ : 47 ಸಂಚಿಕೆ : 332 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com

## ಪಾಲಿಕೆ ಚುನಾವಣೆಯಲ್ಲಿ 1-1 ಸಮಬಲ

### 22ನೇ ವಾರ್ಡ್ ಯಲ್ಲಮ್ಮನಗರದಲ್ಲಿ ಬಿಜೆಪಿಯ ಆರ್. ಶಿವಾನಂದ, 20ನೇ ವಾರ್ಡ್ ಭಾರತ್ ಕಾಲೋನಿಯಲ್ಲಿ ಮೀನಾಕ್ಷಿ ಎಂ. ಜಗದೀಶ್‌ಗೆ ಗೆಲುವು




ದಾವಣಗೆರೆ, ಮಾ. 31 - ನಗರ ಪಾಲಿಕೆಯ ಎರಡು ವಾರ್ಡ್‌ಗಳಿಗೆ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ತಲಾ ಒಂದರಲ್ಲಿ ಗೆಲುವು ಸಾಧಿಸಿವೆ. 22ನೇ ಯಲ್ಲಮ್ಮನಗರ ವಾರ್ಡ್‌ನಲ್ಲಿ ಬಿಜೆಪಿಯ ಆರ್. ಶಿವಾನಂದ ಹಾಗೂ ಭಾರತ್ ಕಾಲೋನಿಯ 20ನೇ ವಾರ್ಡ್‌ನಲ್ಲಿ ಕಾಂಗ್ರೆಸ್‌ನ ಮೀನಾಕ್ಷಿ ಎಂ. ಜಗದೀಶ್ ಗೆದ್ದಿದ್ದಾರೆ.

ಹಿಂದಿನ ಚುನಾವಣೆಯಲ್ಲಿ ಈ ಎರಡೂ ವಾರ್ಡ್‌ಗಳು ಕಾಂಗ್ರೆಸ್ ವಶದಲ್ಲಿದ್ದವು. ವಾರ್ಡ್‌ಗಳ ಸದಸ್ಯರಾದ ದೇವರಮನಿ ಶಿವಕುಮಾರ್ ಹಾಗೂ ಯಶೋಧ ಜೆ. ಉಮೇಶ್ ರಾಜೀನಾಮೆ ನೀಡಿದ್ದರಿಂದ ಸ್ಥಾನಗಳು ತೆರವಾಗಿದ್ದವು. ಬುಧವಾರದ ಫಲಿತಾಂಶದಿಂದ ಪಾಲಿಕೆಯಲ್ಲಿ ಕಾಂಗ್ರೆಸ್ ಆರಂಭದಲ್ಲಿ ಹೊಂದಿದ್ದಕ್ಕಿಂತ ಒಂದು ಸ್ಥಾನ ಕುಸಿದಂತಾಗಿದೆ.

ಪಾಲಿಕೆಯಲ್ಲಿ ಪ್ರಸಕ್ತ ಬಿಜೆಪಿ 18 ಹಾಗೂ ಕಾಂಗ್ರೆಸ್ 21 ಸದಸ್ಯರನ್ನು ಹೊಂದಿದಂತಾಗಿದೆ. ಐವರು ಪಕ್ಷೇತರರಿದ್ದರೆ, ಒಬ್ಬ ಜೆಡಿಎಸ್ ಸದಸ್ಯರಿದ್ದಾರೆ.

ಯಲ್ಲಮ್ಮನಗರ 22ನೇ ವಾರ್ಡ್‌ನಲ್ಲಿ ಆರ್. ಶಿವಾನಂದ್ ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಎಸ್. ರವಿಸ್ವಾಮಿ ಅವರನ್ನು 470 ಮತಗಳ ಅಂತರದಿಂದ ಪರಾಭವಗೊಳಿಸಿದ್ದಾರೆ.

ಕಾಂಗ್ರೆಸ್‌ನಿಂದ ಉಚ್ಚಾಟನೆಗೊಂಡು ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಮಹಮ್ಮದ್ ಮುಜಾಹಿದ್ ಪಾಷ ಅವರು 978 ಮತಗಳನ್ನು ಪಡೆದು ಫಲಿತಾಂಶದಲ್ಲಿ ನಿರ್ಣಾಯಕರಾಗಿದ್ದಾರೆ. ಉಚ್ಚಾಟನೆಯೇ ಕಾಂಗ್ರೆಸ್ ಸೋಲಿಗೆ ಕಾರಣವಾಗಿದೆ. ಉಳಿದಂತೆ ಮೊಹಮ್ಮದ್ ಅಲಿ ಶೋಯೇಬ್ ಅವರು 20 ಮತ್ತು ಖಲೀಲ್ ಬೇಗ್ ಅವರು 10 ಮತ ಪಡೆದಿದ್ದಾರೆ. ನೋಟಾಗೆ 18 ಮತ ಚಲಾವಣೆಯಾಗಿವೆ.

ಭಾರತ್ ಕಾಲೋನಿಯ 20ನೇ ವಾರ್ಡ್‌ನಲ್ಲಿ ನಡೆದ ನೇರ ಸ್ಪರ್ಧೆಯಲ್ಲಿ ಕಾಂಗ್ರೆಸ್‌ನ ಮೀನಾಕ್ಷಿ ಎಂ. ಜಗದೀಶ್ ಅವರು 2392 ಮತ ಪಡೆದು ಗೆದ್ದಿದ್ದಾರೆ. ಬಿಜೆಪಿಯ ಎಂ. ರೇಣುಕಾ 2,046 ಮತಗಳನ್ನು ಪಡೆದಿದ್ದಾರೆ. ಗೆಲುವಿನ ಅಂತರ 346 ಆಗಿದೆ. ನೋಟಾಗೆ 55 ಮತಗಳು ದೊರೆತಿವೆ.

ಗೆಲುವಿನ ನಂತರ ಪತ್ರಿಕೆಯೊಂದಿಗೆ ಮಾತನಾಡಿರುವ ಕಾಂಗ್ರೆಸ್‌ನ ನೂತನ ಕಾರ್ಪೊರೇಟರ್ ಮೀನಾಕ್ಷಿ ಎಂ. ಜಗದೀಶ್, ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಜನತೆಯ ಶ್ರಮದಿಂದ ಗೆಲುವು ಸಾಧಿಸಿದ್ದೇನೆ. ನಾಗರಿಕರಿಗೆ (2ನೇ ಪುಟಕ್ಕೆ)

## ಸಿಎಂ ವಿರುದ್ಧ ಈಶ್ವರಪ್ಪ ಬಂಡಾಯ

### ಪಕ್ಷಪಾತಿ ಯಡಿಯೂರಪ್ಪ ಖಾತೆಯಲ್ಲಿ ಹಸ್ತಕ್ಷೇಪ ಮಾಡಿರುವುದರ ವಿರುದ್ಧ ರಾಜ್ಯಪಾಲರು-ವರಿಷ್ಠರಿಗೆ ದೂರು

ಬೆಂಗಳೂರು, ಮಾ. 31 - ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಮ್ಮ ಖಾತೆಯಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ತಕ್ಷಣವೇ ಮಧ್ಯೆ ಪ್ರವೇಶಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಅವರು ರಾಜ್ಯಪಾಲರನ್ನು ಆಗ್ರಹಿಸಿದ್ದಾರೆ.

ಆ ಮೂಲಕ ರಾಜ್ಯದ ಇತಿಹಾಸದಲ್ಲೇ ಸಚಿವರೊಬ್ಬರು ಮುಖ್ಯಮಂತ್ರಿಗಳ ವಿರುದ್ದ ರಾಜ್ಯಪಾಲರಿಗೆ ದೂರು ನೀಡಿದ ಐತಿಹಾಸಿಕ ಬೆಳವಣಿಗೆ ಘಟಿಸಿದೆ.

ಮುಖ್ಯಮಂತ್ರಿ ಯಡಿಯೂರಪ್ಪ ಅವರು ನಿಯಮಾವಳಿಗಳನ್ನು ಮೀರಿ ತಮ್ಮ ಇಲಾಖೆಯಲ್ಲಿ ಹಸ್ತಕ್ಷೇಪ ನಡೆಸಿದ ಹಲ ಬೆಳವಣಿಗೆಗಳ ಬಗ್ಗೆ ಸಚಿವ ಈಶ್ವರಪ್ಪ ಅವರು ರಾಜ್ಯಪಾಲ ವಜೂಭಾಯಿವಾಲಾ ಅವರಿಗೆ ಬರೆದ ಪತ್ರದಲ್ಲಿ ದೂರಿದ್ದಾರೆ.

ಆ ಮೂಲಕ ಮುಖ್ಯಮಂತ್ರಿ ಯಡಿಯೂರಪ್ಪ ಅವರ ವಿರುದ್ಧ ಬಿಜೆಪಿಯಲ್ಲಿ ಅಧಿಕೃತವಾಗಿಯೇ ಬಂಡಾಯ ಶುರುವಾದಂತಾಗಿದೆ.

ಮುಖ್ಯಮಂತ್ರಿಗಳು ತಮ್ಮ ಇಲಾಖೆಯಲ್ಲಿ ಹಸ್ತಕ್ಷೇಪ ನಡೆಸಿ ಜನಪ್ರತಿನಿಧಿಗಳ ಎದುರಿನಲ್ಲಿ ತಮಗೆ ಮುಖಭಂಗವಾಗುವಂತೆ ನಡೆದುಕೊಂಡಿದ್ದಾರೆ ಎಂದು ಈಶ್ವರಪ್ಪ ಸೂಚ್ಯವಾಗಿ ಹೇಳಿದ್ದಾರೆ.

ಕಳೆದ ಬಜೆಟ್‌ನಲ್ಲಿ ತಮ್ಮ ಇಲಾಖೆಗೆ ನಿಗದಿ ಮಾಡಿದ ಅನುದಾನವನ್ನು ಬಿಡುಗಡೆ ಮಾಡದ ಮುಖ್ಯಮಂತ್ರಿಗಳ ವಿರುದ್ಧ ಅಸಮಾಧಾನಗೊಂಡಿದ್ದ ಈಶ್ವರಪ್ಪ ಅವರು, ಇದೇ ಕಾರಣಕ್ಕಾಗಿ ಯಡಿಯೂರಪ್ಪ ಅವರ ಮುಖಕ್ಕೆ ಮುಖ ಕೊಟ್ಟು ಮಾತನಾಡುವುದನ್ನು ನಿಲ್ಲಿಸಿದ್ದರು. ಈ ಮಧ್ಯೆ ಯಡಿಯೂರಪ್ಪ ಅವರ ನಡವಳಿಕೆಯ ವಿರುದ್ಧ ಸಚಿವ ಈಶ್ವರಪ್ಪ ಅವರು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಷಾ, ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ.ನಡ್ಡಾ, ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರಿಗೆ ಪತ್ರ ಬರೆದಿದ್ದರು. ಈ ಮಧ್ಯದ ಕೆಲ ಬೆಳವಣಿಗೆಗಳಿಂದ ಇನ್ನಷ್ಟು (2ನೇ ಪುಟಕ್ಕೆ)

## ಯಡಿಯೂರಪ್ಪಗೆ ಆಪರೇಷನ್ ಕಂಟಕ

### ಶಾಸಕನ ಸೆಳೆಯುವ ಯತ್ನದ ಆರೋಪ: ತನಿಖೆಗೆ ಹೈಕೋರ್ಟ್ ಅನುಮತಿ

ಬೆಂಗಳೂರು, ಮಾ. 31 - ಶಾಸಕರಿಗೆ ಹಣದ ಆಮಿಷ ಒಡ್ಡಿ ಆಪರೇಷನ್ ಕಮಲ ನಡೆಸಿದ ಆರೋಪಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಅವರ ವಿರುದ್ಧ ತನಿಖೆ ನಡೆಸಲು ರಾಜ್ಯ ಹೈಕೋರ್ಟ್ ಅನುಮತಿ ನೀಡಿದೆ.

ಆಪರೇಷನ್ ಕಮಲ ಪ್ರಕರಣಕ್ಕೆ ಸಂಬಂಧಿಸಿದಂತೆ ದೇವದುರ್ಗ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆದರೆ ಎಫ್‌ಐಆರ್‌ಗೆ ತಡೆ ಕೋರಿ ಯಡಿಯೂರಪ್ಪ ಅವರು ಸಲ್ಲಿಸಿದ್ದ ಅರ್ಜಿ ಪುರಸ್ಕರಿಸಿದ್ದ ಹೈಕೋರ್ಟ್ ತಡೆಯಾಜ್ಞೆ ನೀಡಿತ್ತು. ಈಗ (2ನೇ ಪುಟಕ್ಕೆ)

## ಮಾಜಿ ಪ್ರಧಾನಿ ದೇವೇಗೌಡ ಪತ್ನಿ ಚೆನ್ನಮ್ಮಗೆ ಕೊರೊನಾ

ಬೆಂಗಳೂರು, ಮಾ. 31 - ಮಾಜಿ ಪ್ರಧಾನಿ ಹೆಚ್. ಡಿ. ದೇವೇಗೌಡ ಅವರ ಪತ್ನಿ ಚೆನ್ನಮ್ಮ ಅವರಿಗೆ ಕೊರೊನಾ ಸೋಂಕು ದೃಢಪಟ್ಟಿದೆ.

ದೇವೇಗೌಡರು ನಗರದ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದು, ಚೆನ್ನಮ್ಮ ಅವರಿಗೆ ಮನೆಯಲ್ಲೇ ಆರೈಕೆ ಮಾಡಲಾಗುತ್ತಿದೆ.

ಕಳೆದ ಕೆಲ ದಿನಗಳಿಂದ ದೇವೇಗೌಡರಿಗೆ ಶೀತ ಕಾಣಿಸಿಕೊಂಡಿತ್ತು. ಅವರು ಮನೆಯಲ್ಲೇ ವಿಶ್ರಾಂತಿ ಪಡೆಯುತ್ತಿದ್ದರು.

ಕೊರೊನಾ ಪರೀಕ್ಷೆಗೆ ಒಳಪಡಿಸಿದಾಗ ಸೋಂಕು ದೃಢಪಟ್ಟಿರುವುದು ಇಂದ ಬೆಳಿಗ್ಗೆ ವರದಿಯಾಗಿದೆ.

ದೇವೇಗೌಡರು ಮತ್ತು ಅವರ ಪತ್ನಿಗೆ ಸೋಂಕು ದೃಢಪಟ್ಟ ವಿಷಯ ತಿಳಿಯುತ್ತಿದ್ದಂತೆ ಪ್ರಧಾನಿ ನರೇಂದ್ರ ಮೋದಿ ದೂರವಾಣಿ ಮೂಲಕ ಗೌಡರನ್ನು ಸಂಪರ್ಕಿಸಿ, ಆರೋಗ್ಯ ವಿಚಾರಿಸಿದ್ದಾರೆ. ಅಷ್ಟೇ (2ನೇ ಪುಟಕ್ಕೆ)

## ದಾವಣಗೆರೆ ತಾಲ್ಲೂಕಿನ ಮೂರು ಗ್ರಾ.ಪಂ.ಗಳ ಫಲಿತಾಂಶ ಪ್ರಕಟ

**ಬೇತೂರು, ಕನಗೊಂಡನಹಳ್ಳಿ ಹಾಗೂ ಕುಕ್ಕುವಾಡ ಗ್ರಾಮ ಪಂಚಾಯ್ತಿಗಳ ಸದಸ್ಯರ ಭವಿಷ್ಯ ನಿರ್ಧಾರ**

ದಾವಣಗೆರೆ, ಮಾ. 31 - ತಾಲ್ಲೂಕಿನ ಬೇತೂರು, ಕನಗೊಂಡನಹಳ್ಳಿ ಹಾಗೂ ಕುಕ್ಕುವಾಡ ಗ್ರಾಮ ಪಂಚಾಯ್ತಿಗಳಿಗೆ ನಡೆದ ಚುನಾವಣೆಯ ಫಲಿತಾಂಶ ಗುರುವಾರದಂದು ಪ್ರಕಟವಾಗಿದೆ. ಕಳೆದ ಸೋಮವಾರ ಚುನಾವಣೆ ನಡೆದಿತ್ತು.

ನಗರದ ರಾಜನಹಳ್ಳಿ ಸೀತಮ್ಮ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ಮತಗಳ ಎಣಿಕೆ ನಡೆಯಿತು. ಮೂರು ಗ್ರಾಮ ಪಂಚಾಯ್ತಿಗಳ ಒಟ್ಟು 14 ಕ್ಷೇತ್ರಗಳ 45 ಸ್ಥಾನಗಳಿಗೆ ನಡೆದ ಚುನಾವಣೆಗೆ ಬೆಳಿಗ್ಗೆ 8 ಗಂಟೆಯಿಂದ ಮತ ಎಣಿಕೆ ಆರಂಭವಾಗಿ ರಾತ್ರಿ 8 ಗಂಟೆಯವರೆಗೂ ಮುಂದುವರೆದಿತ್ತು.

ಕುಕ್ಕುವಾಡ ಗ್ರಾಮ ಪಂಚಾಯ್ತಿಯ ಕುಕ್ಕುವಾಡ ಕ್ಷೇತ್ರಕ್ಕೆ ನಡೆದ ಚುನಾವಣೆಯಲ್ಲಿ ಲಕ್ಷ್ಮಮ್ಮ ವೆಂಕಟೇಶ್ - ಎಸ್.ಸಿ. ಮಹಿಳೆ (199 ಮತ), ಕೆ.ಎಂ. ಶಿವನಗೌಡ – ಹಿಂದುಳಿದ ಬ ವರ್ಗ (205), ಕೆ. ಶ್ರೀನಿವಾಸ – ಸಾಮಾನ್ಯ (3ನೇ ಪುಟಕ್ಕೆ)

## ಸಿ.ಡಿ. ಯುವತಿಯ ವಿಡಿಯೋ ತನಿಖಾಧಿಕಾರಿಗಳಿಂದ ಸೋರಿಕೆ

**ವಕೀಲರ ಆರೋಪ**

ಬೆಂಗಳೂರು, ಮಾ. 31 - ಸಿ.ಡಿ. ಪ್ರಕರಣದ ಸಂತ್ರಸ್ತೆ ವಿಡಿಯೋವನ್ನು ತನಿಖಾ ಸಂಸ್ಥೆ ಅಧಿಕಾರಿಗಳೇ ಚಿತ್ರೀಕರಣ ಮಾಡಿ, ಮಾಧ್ಯಮಕ್ಕೆ ಸೋರಿಕೆ ಮಾಡಿದ್ದಾರೆ ಎಂದು ವಕೀಲ ಜಗದೀಶ್ ಕುಮಾರ್ ಆರೋಪಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ನೇರ ಪ್ರಸಾರದಲ್ಲಿ ಮಾತನಾಡಿದ ಅವರು, ಸಂತ್ರಸ್ತೆ ವಿಡಿಯೋ ಚಿತ್ರೀಕರಣ ಮಾಡಿ, ನಿರ್ಭಯ ಪ್ರಕರಣದಲ್ಲಿ ರೂಪಿಸಲಾದ ನಿಯಮಗಳನ್ನು ಉಲ್ಲಂಘಿಸಿದ್ದಾರೆ ಎಂದು (4ನೇ ಪುಟಕ್ಕೆ)

## ಕಡ್ಲೆಬಾಳು ಪ್ರಾಥಮಿಕ ಸಹಕಾರ ಸಂಘದ ಅಧ್ಯಕ್ಷರಾಗಿ ಸತ್ಯನಾರಾಯಣ



ದಾವಣಗೆರೆ, ಮಾ.31- ತಾಲ್ಲೂಕಿನ ಕಡ್ಲೆಬಾಳು ಗ್ರಾಮದ ಪ್ರಾಥಮಿಕ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರಾಗಿ ವಿ. ಸತ್ಯನಾರಾಯಣ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ತಾಲ್ಲೂಕು ಪಂಚಾಯ್ತಿ ಮಾಜಿ ಅಧ್ಯಕ್ಷ ಮೇಕಾ ಮುರಳಿಕೃಷ್ಣ, ಕಡ್ಲೆಬಾಳು ಪ್ರಾಥಮಿಕ (5ನೇ ಪುಟಕ್ಕೆ)

## ನಿವೃತ್ತ ಎಸ್‌ಐ ಎಂ.ಎಸ್. ತಳವಾರ ಅವರಿಗೆ ಪತ್ನಿ ವಿಯೋಗ



ದಾವಣಗೆರೆ ಜಯನಗರ 'ಬಿ' ಬ್ಲಾಕ್ ನಿವಾಸಿ ಹಾಗೂ ನಿವೃತ್ತ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ (ವೈರ್‌ಲೆಸ್) ಶ್ರೀ ಎಂ.ಎಸ್. ತಳವಾರ ಅವರ ಧರ್ಮಪತ್ನಿ **ಶ್ರೀಮತಿ ರತ್ನಮ್ಮ (ಸುಮಂಗಲ)** ಅವರು ದಿನಾಂಕ 31.03.2021ರ ಬುಧವಾರ ಬೆಳಿಗ್ಗೆ 11.15 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ ಸುಮಾರು 69 ವರ್ಷ ವಯಸ್ಸಾಗಿತ್ತು. ರತ್ನಮ್ಮ, ನಿಟುವಳ್ಳಿಯ ದಿ॥ ಎನ್.ಆರ್. ಹಾಲಸ್ವಾಮಿ, ದಿ॥ ಹೆಚ್.ಆರ್. ಲಿಂಗಸ್ವಾಮಿ, ಶ್ರೀ ಎನ್.ಆರ್. ಶಿವಸ್ವಾಮಿ, ಶ್ರೀ ಎನ್.ಆರ್. ಮಂಜುನಾಥಸ್ವಾಮಿ ಅವರ ಸಹೋದರಿ. ಪತಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 01.04.2021ರ ಗುರುವಾರ ಬೆಳಿಗ್ಗೆ 11.30 ಕ್ಕೆ ಆರ್.ಹೆಚ್. ಬೃಂದಾವನದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
ಮೊ. : 89717 21431, 98443 04848



# ಮಾಜಿ ಪ್ರಧಾನಿ ದೇವೇಗೌಡ ಪತ್ನಿ ಚೆನ್ನಮ್ಮಗೆ ಕೊರೊನಾ

**(1ನೇ ಪುಟದಿಂದ)** ಅಲ್ಲ ಅವರ ಪತ್ನಿ ಬಗ್ಗೆಯು ಮಾಹಿತಿ ಪಡೆದ ಪ್ರಧಾನಿ ಇಬ್ಬರೂ ಬೇಗನೆ ಗುಣಮುಖರಾಗುವಂತೆ ಪ್ರಾರ್ಥಿಸಿದ್ದಾರೆ.

ತಮಗೆ ಮತ್ತು ತಮ್ಮ ಪತ್ನಿಗೆ ಸೋಂಕು ತಗಲಿರುವುದನ್ನು ಗೌಡರು ಟ್ವೀಟ್ ಮೂಲಕ ಹಂಚಿಕೊಂಡು, ತಮ್ಮನ್ನು ಭೇಟಿ ಮಾಡಿದವರಿಗೆ ಮತ್ತು ಕಾರ್ಯಕರ್ತರು ಕೊರೊನಾ ಪರೀಕ್ಷೆ ಮಾಡಿಸಿಕೊಳ್ಳಿ. ಯಾರೂ ಆತಂಕಕ್ಕೆ ಒಳಗಾಗಬೇಡಿ ಎಂದಿದ್ದಾರೆ.

ಈ ಮಧ್ಯೆ ಅವರ ಪುತ್ರ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ತಮ್ಮ ತಂದೆ, ತಾಯಿಗೆ ಸೋಂಕು ತಗಲಿರುವುದನ್ನು ದೃಢಪಡಿಸಿರುವುದಲ್ಲದೆ, ಅವರು ಆರೋಗ್ಯದಿಂದಿದ್ದಾರೆ ಎಂದಿದ್ದಾರೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಸಂಪುಟದ ಹಲವು ಸಹೋದ್ಯೋಗಿಗಳು ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಸೇರಿದಂತೆ ಹಲವು ನಾಯಕರು ದಂಪತಿಯು ಕೊರೊನಾ ಸೋಂಕಿನಿಂದ ಸಂಪೂರ್ಣ ಗುಣಮುಖರಾಗಲಿ, ಶೀಘ್ರದಲ್ಲೇ ಚೇತರಿಸಿಕೊಂಡು ಎಂದಿನಂತೆ ತಮ್ಮ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲಿ ಎಂದು ಪ್ರಾರ್ಥಿಸಿದ್ದಾರೆ.

# ಪಾಲಿಕೆ ಚುನಾವಣೆಯಲ್ಲಿ 1-1 ಸಮಬಲ





**(1ನೇ ಪುಟದಿಂದ)** ಮೂಲಭೂತ ಸೌಲಭ್ಯ ಕಲ್ಪಿಸುವುದು ಹಾಗೂ ವಾರ್ಡ್ ಅಭಿವೃದ್ಧಿ ಮೊದಲ ಆದ್ಯತೆಯಾಗಿರಲಿದೆ ಎಂದಿದ್ದಾರೆ.

ಯಲ್ಲಮ್ಮನಗರದ ಬಿಜೆಪಿಯ ನೂತನ ಕಾರ್ಪೊರೇಟರ್ ಆರ್. ಶಿವಾನಂದ ಮಾತನಾಡಿದ್ದು, ಪಕ್ಷದ ಮುಖಂಡರು, ಇತರೆ ಕಾರ್ಪೊರೇಟರ್‌ಗಳು ಹಾಗೂ ಕಾರ್ಯಕರ್ತರ ಹುಮ್ಮಸ್ಸಿನಿಂದ ಗೆಲುವಿನ ವಿಶ್ವಾಸ ಇತ್ತು. ಅದರಂತೆ ಫಲಿತಾಂಶ ಬಂದಿದೆ.

ಮೊದಲ ಬಾರಿಗೆ ವಾರ್ಡ್‌ನಲ್ಲಿ ಬಿಜೆಪಿ ಗೆದ್ದಿದ್ದೆ ಎಂದಿದ್ದಾರೆ.

ಡೋರ್ ನಂಬರ್ ಕಲ್ಪಿಸುವುದು, ಚರಂಡಿ, ನೀರು ಹಾಗೂ ಸ್ವಚ್ಛತೆ ವಾರ್ಡ್‌ನ ಪ್ರಮುಖ ಸಮಸ್ಯೆಗಳಾಗಿದ್ದು, ಆ ಬಗ್ಗೆ ಕಾರ್ಯ ನಿರ್ವಹಿಸುವುದಾಗಿ ತಿಳಿಸಿದ್ದಾರೆ.

# ಯಡಿಯೂರಪ್ಪ ವಿರುದ್ಧ ಈಶ್ವರಪ್ಪ ಬಂಡಾಯ

**(1ನೇ ಪುಟದಿಂದ)** ಆಕ್ರೋಶಗೊಂಡಿರುವ ಅವರು ಇದೀಗ ರಾಜ್ಯಪಾಲ ರಿಗೇ ದೂರು ನೀಡುವ ಮೂಲಕ ನಿರ್ಣಾಯಕ ಕದನಕ್ಕಿಳಿದಿದ್ದಾರೆ.

**ಏಕಪಕ್ಷೀಯ ನಿರ್ಧಾರ :** ನಿನ್ನೆ ಬುಧವಾರದಂದು ಈಶ್ವರಪ್ಪ ಅವರು ರಾಜ್ಯಪಾಲರಿಗೆ ವೈಯಕ್ತಿಕವಾಗಿ ದೂರು ಸಲ್ಲಿಸಿದ್ದಾರೆ. ಯಡಿಯೂರಪ್ಪ ಏಕಪಕ್ಷೀಯವಾಗಿ ಆಡಳಿತ ನಡೆಸುತ್ತಿದ್ದಾರೆ ಹಾಗೂ 2020-21ರ ಬಜೆಟ್‌ನಲ್ಲಿ ನಿರ್ದಿಷ್ಟ ಯೋಜನೆಗಳಿಗೆ ಅನುದಾನ ಬಿಡುಗಡೆ ಮಾಡಿಲ್ಲ ಎಂದು ಆರೋಪಿಸಿದ್ದಾರೆ.

ಕಳೆದ ಒಂದೂವರೆ ವರ್ಷಗಳಲ್ಲಿ ಹಣಕಾಸು ಖಾತೆ ಹೊಂದಿರುವ ಮುಖ್ಯಮಂತ್ರಿ, ಗ್ರಾಮೀಣಾಭಿವೃದ್ಧಿ ಸಚಿವನಾದ ನನ್ನ ಗಮನಕ್ಕೆ ತರದೇ ಇಲಾಖೆಯ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಂಡಿದ್ದಾರೆ ಎಂದು ಹೇಳಿದ್ದಾರೆ.

ಗ್ರಾಮೀಣ ಸುಮಾರ್ಗ ಯೋಜನೆಯಡಿ 20 ಸಾವಿರ ಕಿ.ಮೀ. ಗ್ರಾಮೀಣ ರಸ್ತೆ ನಿರ್ಮಾಣಕ್ಕೆ 780 ಕೋಟಿ ರೂ. ಮೀಸಲಿಡಲಾಗಿತ್ತು. ಆದರೆ, 2020-21ರ ಬಜೆಟ್‌ನಲ್ಲಿ ಈ ಯೋಜನೆಯನ್ನು ಸ್ಥಗಿತಗೊಳಿಸಲಾಗಿದೆ ಎಂದವರು ಹೇಳಿದ್ದಾರೆ.

ಹಣಕಾಸು ಇಲಾಖೆ ಈ ಯೋಜನೆಗೆ ಒಂದೂವರೆ ವರ್ಷದಿಂದ ಹಣ ಕೊಟ್ಟಿಲ್ಲ. ಆದರೆ, ಬಜೆಟ್ ಹೊರಗೆ ವಿಶೇಷ ಅನುದಾನಗಳ ರೂಪದಲ್ಲಿ 1,439.2 ಕೋಟಿ ರೂ.ಗಳನ್ನು ನೀಡಲಾಗಿದೆ. ಇತ್ತೀಚೆಗೆ ಫೆಬ್ರವರಿ 17ರಂದು 81 ವಿಧಾನಸಭಾ ಕ್ಷೇತ್ರಗಳಿಗೆ 5 ಕೋಟಿ ರೂ.ಗಳಿಂದ 23 ಕೋಟಿ ರೂ.ಗಳವರೆಗೆ ಅನುದಾನ ನೀಡಲಾಗಿದೆ ಎಂದು ಈಶ್ವರಪ್ಪ ಗಮನ ಸೆಳೆದಿದ್ದಾರೆ.

ಈ ನಿರ್ಧಾರದಿಂದ ರಾಜ್ಯದ ಹಣಕಾಸು ಯೋಜನೆ ಮೇಲೆ ಹಾಗೂ ಇಲಾಖೆಯ ಅಭಿವೃದ್ಧಿ ಕ್ರಿಯಾ ಯೋಜನೆಯ ಮೇಲೆ ದೀರ್ಘಾವಧಿ ಪರಿಣಾಮವಾಗುತ್ತದೆ ಎಂದಿದ್ದಾರೆ.

**ಪಕ್ಷಪಾತಿ ಸಿಎಂ :** ಯಡಿಯೂರಪ್ಪ ಅವರು ಪಕ್ಷಪಾತಿಯಾಗಿ ತಮಗೆ ಹತ್ತಿರವಾಗಿರುವವರಿಗೆ ವಿಶೇಷ ಅನುದಾನ ನೀಡುತ್ತಿದ್ದಾರೆ ಎಂದೂ ಅವರು ಹೇಳಿದ್ದಾರೆ.

ಗ್ರಾಮೀಣಾಭಿವೃದ್ಧಿ ಇಲಾಖೆಗೆ ನಿಗದಿಯಾದ ಬಹುತೇಕ ಅನುದಾನವನ್ನು ಬಿಡುಗಡೆ ಮಾಡಿಲ್ಲ. 3,998.5 ಕೋಟಿ ರೂ. ಅನುದಾನದ ಪೈಕಿ ಕೇವಲ 1,600.4 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಇದರಿಂದಾಗಿ ನಮ್ಮ ಶಾಸಕರ ಎದುರೇ ಬೇಸರ ಪಟ್ಟುಕೊಳ್ಳುವಂತಾಗಿದೆ ಎಂದು ಈಶ್ವರಪ್ಪ ತಿಳಿಸಿದ್ದಾರೆ. ಬಿಜೆಪಿ ಪಕ್ಷ ಅಧಿಕಾರದಲ್ಲಿದ್ದರೂ ಸ್ವಂತ ಕ್ಷೇತ್ರಗಳಿಗೆ ಅತಿ ಕಡಿಮೆ ಅನುದಾನ ಸಿಗುತ್ತಿರುವ ಕಾರಣಕ್ಕಾಗಿ ನನ್ನ ಪಕ್ಷದ ಶಾಸಕರು ಹಾಗೂ ಕಾರ್ಯಕರ್ತರ ಎದುರು ಮುಜುಗರಕ್ಕೀಡಾಗುವ ಪರಿಸ್ಥಿತಿ ಎದುರಾಗಿದೆ ಎಂದೂ ಸಚಿವರು ಪತ್ರದಲ್ಲಿ ತಿಳಿಸಿದ್ದಾರೆ.

## ಹುಟ್ಟುಹಬ್ಬ - ಸ್ಮರಣೆ



**೮೦॥ ಶ್ರೀ ಹೆಚ್. ಶಿವಪ್ಪನವರು**
ಮಾಜಿ ಸಚಿವರು, ಹರಿಹರ ಕ್ಷೇತ್ರ.

*ದಿನಾಂಕ 01.04.2021ರಂದು*
*ನಿಮ್ಮ ಹುಟ್ಟುಹಬ್ಬದ ಈ ಶುಭ ಸಂದರ್ಭದಲ್ಲಿ*
*ಸದಾ ನಿಮ್ಮ ಸ್ಮರಣೆಯಲ್ಲಿರುವ...*

- **ಬೆಳಲಗೆರೆ ಹಾಲಸಿದ್ದಪ್ಪ**
  ಮಾಜಿ ಅಧ್ಯಕ್ಷರು, ದೊಡ್ಡಬಾತಿಯ ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ, ಮಿಟ್ಲಕಟ್ಟೆ, ಹರಿಹರ ತಾಲ್ಲೂಕು.
- **ಬಿ.ಹೆಚ್. ನಾಗರಾಜ್**
  ಮಾಜಿ ಅಧ್ಯಕ್ಷರು, ಬೆಳಲಗೆರೆ ಗ್ರಾಮ ಪಂಚಾಯಿತಿ
- **ಬಿ.ಹೆಚ್. ಸುರೇಶ್,** ಮಾಜಿ ಅಧ್ಯಕ್ಷರು, ಸಾಲಕಟ್ಟೆ ಗ್ರಾಮ ಪಂಚಾಯಿತಿ, ಮಿಟ್ಲಕಟ್ಟೆ.
- **ಬಿ.ಎಸ್. ವಿಶ್ವನಾಥ್**
  ಬಾತಿ ರೇವಣಸಿದ್ದೇಶ್ವರ ರೈಸ್ ಇಂಡಸ್ಟ್ರೀಸ್, ಮಿಟ್ಲಕಟ್ಟೆ
- **ಬಿ.ಹೆಚ್. ಮಂಜುನಾಥ**
  ಪಶು ಆಹಾರ ವಿತರಕರು, ದಾವಣಗೆರೆ-ಮಿಟ್ಲಕಟ್ಟೆ.

## ದ್ವಿತೀಯ ಪುಣ್ಯಸ್ಮರಣೆ




ಜನನ : 06.08.1952 ಮರಣ : 01.04.2019

**ದಿ. ಸಿ. ದ್ಯಾಮಲಾಂಬಿಕ** (ನೇತ್ರದಾನಿ)

ಇಂದಿಗೆ ನೀವು ನಮ್ಮನ್ನಗಲಿ ಎರಡು ವರ್ಷಗಳಾದವು.
ಸದಾ ತಮ್ಮ ಸ್ಮರಣೆಯಲ್ಲಿರುವ
**ಕೆ. ತಿಪ್ಪೇಸ್ವಾಮಿ, ನಿವೃತ್ತ ಪಿ.ಎಸ್.ಐ.**
**ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು,**
**ತೋಟದ ಕಾಡಪ್ಪನವರ ವಂಶಸ್ಥರು**
**ಕೊಳಾಳು ಹಾಗೂ ಬಂಧು-ಮಿತ್ರರು.**

## 4ನೇ ವರ್ಷದ ಪುಣ್ಯಸ್ಮರಣೆ



ಜನನ 07.03.1968 ದೈವಾಧೀನ 01.04.2017

**ದಿ॥ ಶ್ರೀ ಎಸ್. ರಾಜೇಶ್**
ಎಂ.ಟೆಕ್ (ಪಿ.ಎಚ್.ಡಿ.)

ನೀವು ದೈವಾಧೀನರಾಗಿ ಇಂದಿಗೆ ನಾಲ್ಕು ವರ್ಷಗಳಾದವು
ಸದಾ ನಿಮ್ಮ ಸ್ಮರಣೆಯಲ್ಲಿರುವ....

ದುಃಖತಪ್ತರಾದ : **ತಂದೆ-ತಾಯಿ, ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಬಂಧು-ಮಿತ್ರರು ಹಾಗೂ ಗೌಡ್ರು ವಂಶಸ್ಥರು, ದ್ಯಾಮೇನಹಳ್ಳಿ ಮತ್ತು ಟಿ. ನುಲೇನೂರು ನಾಗಪ್ಪ ವಂಶಸ್ಥರು, ಚಿತ್ರದುರ್ಗ**

## ಕ್ಯಾರಕಟ್ಟೆ ಕೊಟ್ರಯ್ಯ ನಿಧನ



ದಾವಣಗೆರೆ ಆಂಜನೇಯ ಬಡಾವಣೆ, 17 ನೇ ಕ್ರಾಸ್, ಸಿದ್ದೇಶ್ವರ ಕಾಲೇಜು ಎದುರು ವಾಸಿ, ಹರಪನಹಳ್ಳಿ ತಾಲ್ಲೂಕು ಕ್ಯಾರಕಟ್ಟೆ ಗ್ರಾಮದ ಎಂ.ಕೊಟ್ರಯ್ಯ (ನಿವೃತ್ತ ಶಿಕ್ಷಕರು) (83) ಅವರು ದಿನಾಂಕ 31.03.2021ರ ಬುಧವಾರ ಮಧ್ಯಾಹ್ನ 2 ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 1.04.2021ರ ಗುರುವಾರ ಮಧ್ಯಾಹ್ನ 12.30ಕ್ಕೆ ಶಾಮನೂರಿನ ರುದ್ರಭೂಮಿಯಲ್ಲಿ ನೆರವೇರಲಿದೆ.

## ಶ್ರೀಮತಿ ರತ್ನಮ್ಮ (ಸುಮಂಗಲ) ನಿಧನ



ದಾವಣಗೆರೆ ಜಯನಗರ 'ಬಿ' ಬ್ಲಾಕ್ ನಿವಾಸಿ ಹಾಗೂ ನಿವೃತ್ತ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ (ವೈರ್‌ಲೆಸ್) ಶ್ರೀ ಎಂ.ಎಸ್. ತಳವಾರ ಅವರ ಧರ್ಮಪತ್ನಿ ಶ್ರೀಮತಿ ರತ್ನಮ್ಮ (ಸುಮಂಗಲ) (69) ಅವರು ದಿನಾಂಕ 31.03.2021ರ ಬುಧವಾರ ಬೆಳಿಗ್ಗೆ 11.15 ಕ್ಕೆ ನಿಧನರಾದರು. ಪತಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 01.04.2021ರ ಗುರುವಾರ ಬೆಳಿಗ್ಗೆ 11.30 ಕ್ಕೆ ಆರ್.ಹೆಚ್. ಬೃಂದಾವನದಲ್ಲಿ ನೆರವೇರಲಿದೆ.

# ಮುಖ್ಯಮಂತ್ರಿ ಯಡಿಯೂರಪ್ಪಗೆ ಆಪರೇಷನ್ ಕಂಟಕ


**(1ನೇ ಪುಟದಿಂದ)** ತಡೆಯಾಜ್ಞೆ ತೆರವುಗೊಳಿಸಿರುವ ಹೈಕೋರ್ಟ್ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹಾ ಅವರಿದ್ದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ, ಯಡಿಯೂರಪ್ಪ ವಿರುದ್ಧದ ಆಪರೇಷನ್ ಕಮಲ ಆಡಿಯೋ ಪ್ರಕರಣದ ತನಿಖೆಗೆ ಆದೇಶ ನೀಡಿದೆ.

ನಮ್ಮ ತಂದೆಯ ಕಡೆಯಿಂದ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡಿಸಲು ಹಣದ ಆಮಿಷ ಒಡ್ಡಲಾಗಿತ್ತು ಎಂದು ಗುರುಮಿಟ್ಕಲ್ ಶಾಸಕ ನಾಗನಗೌಡ ಕಂದಕೂರು ಅವರ ಪುತ್ರ ಶರಣಗೌಡ ಪಾಟೀಲ್ ಕಂದಕೂರ ಅವರು ಯಡಿಯೂರಪ್ಪ ವಿರುದ್ಧ ದೇವದುರ್ಗ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಅಲ್ಲದೆ, ಈ ಕುರಿತು ಆಡಿಯೋ ಸಹ ಬಿಡುಗಡೆ ಮಾಡಿದ್ದರು. ಅಂದಿನ ಸ್ಪೀಕರ್ ರಮೇಶ್ ಕುಮಾರ್ ಅವರು ಪ್ರಕರಣವನ್ನು ಎಸ್‌ಐಟಿ ತನಿಖೆಗೆ ನೀಡುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಿದ್ದರು. ಆದರೆ, ಆಗಿನ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಈ ಪ್ರಕರಣವನ್ನು ಎಸ್.ಐ.ಟಿ. ತನಿಖೆಗೆ ನೀಡಿರಲಿಲ್ಲ.

## ನೆನಪಿನಂಗಳದಾರಾಧನೆ ಆಹ್ವಾನ ಪತ್ರಿಕೆ

**'ನಮನಗಳು'**

ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದ ವಾಸಿಯಾದ
**ಪ್ರೊ॥ ಬಾತಿ ಬಸವರಾಜ್ ಮತ್ತು ಕುಟುಂಬದವರು** ಮಾಡುವ ನಮಸ್ಕಾರಗಳು.
ಆತ್ಮೀಯರೇ, ದಿನಾಂಕ 09-08-2020ನೇ ಭಾನುವಾರ ನನ್ನ ಸಹೋದರ




**ಶ್ರೀ ಭರಮಜ್ಜರ ನಾಗರಾಜಪ್ಪನವರು**

ಮರಣ ವೃತ್ತಿಕಾ ಪ್ರಯುಕ್ತ ಸುಶಾಂತತೆಗಾಗಿ
**'ನೆನಪಿನಂಗಳದಾರಾಧನೆ'ಯನ್ನು**
ದಿನಾಂಕ 02-04-2021ನೇ ಶುಕ್ರವಾರ ಬೆಳಿಗ್ಗೆ 11-00 ಗಂಟೆಗೆ ದೊಡ್ಡಬಾತಿಯ ಸ್ವಗೃಹದಲ್ಲಿ ನೆರವೇರಿಸಲಿದ್ದೇವೆ. ತಾವುಗಳೆಲ್ಲರೂ ಶಾಂತೋದಯಕ್ಕೆ ಆಗಮಿಸಬೇಕಾಗಿ ವಿನಂತಿಕೊಳ್ಳುತ್ತೇವೆ.

**ತಮ್ಮ ಅಭಿಲಕ್ಷಿತರು**
**ಶ್ರೀಮತಿ ಎಂ.ಎಸ್. ನಾಗಮ್ಮ ಮತ್ತು ಕುಟುಂಬದವರು**
**ಶ್ರೀಮತಿ ಎಸ್. ಲೀಲಾವತಿ ಮತ್ತು ಕುಟುಂಬದವರು**
**ಬಂಧುಗಳು ಮತ್ತು ಮಿತ್ರರು, ದೊಡ್ಡಬಾತಿ.**

**ಇಂದ : ಪ್ರೊ॥ ಬಾತಿ ಬಸವರಾಜ್**
**ದೊಡ್ಡಬಾತಿ - 577 506. ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.**
**ಮೊ. : 88845 27130, 98868 40401**

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ : **31-03-2021**ರಂದು ದೈವಾದೀನರಾದ
ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ ಸಂಘದ ಮಾಜಿ ಕಾರ್ಯದರ್ಶಿಗಳು,
ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪ್. ಬ್ಯಾಂಕ್ ಲಿ.,ನ ಮಾಜಿ ಮ್ಯಾನೇಜಿಂಗ್ ಡೈರೆಕ್ಟರ್,
ಶ್ರೀ ಕನ್ನಿಕಾಪರಮೇಶ್ವರಿ ದೇವಸ್ಥಾನ ಡೈಮಂಡ್ ಜ್ಯೂಬಿಲಿ ವಿದ್ಯಾಪೀಠದ ಅಧ್ಯಕ್ಷರು,
ಅಖಿಲ ಭಾರತ ವಾಸವಿ ಎಜುಕೇಶನಲ್ ಟ್ರಸ್ಟ್ ಸಂಸ್ಥಾಪಕರು,
ಆರ್ಯವೈಶ್ಯ ಸಮಾಜದ ಹಿರಿಯ ಮುಖಂಡರಾದ

**ಶ್ರೀ ಕೆ.ಜಿ. ಸತ್ಯನಾರಾಯಣ ಶ್ರೇಷ್ಠಿ**

ಅವರ ಆತ್ಮಕ್ಕೆ ಚಿರಶಾಂತಿ ಹಾಗು ಕುಟುಂಬ ವರ್ಗಕ್ಕೆ ದುಃಖ ಭರಿಸುವ ಶಕ್ತಿಯನ್ನು ಮಾತೆ ಶ್ರೀ ಕನ್ಯಕಾಪರಮೇಶ್ವರಿ ದೇವಿಯು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

ಆಜೀವ ಗೌರವಾಧ್ಯಕ್ಷರು, ಅಧ್ಯಕ್ಷರು, ಕಾರ್ಯಾಧ್ಯಕ್ಷರು, ಕಾರ್ಯದರ್ಶಿ, ಸಹ ಕಾರ್ಯದರ್ಶಿ, ಖಜಾಂಚಿ,
ಎಲ್ಲಾ ನಿರ್ದೇಶಕರುಗಳು ಹಾಗೂ ಸರ್ವ ಸದಸ್ಯರುಗಳು
**ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ ಸಂಘ (ರಿ.),** ಎಸ್.ಕೆ.ಪಿ. ದೇವಸ್ಥಾನ ರಸ್ತೆ, ದಾವಣಗೆರೆ.

ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರುಗಳು, ವ್ಯವಸ್ಥಾಪಕರುಗಳು, ಅಧಿಕಾರಿ ವರ್ಗದವರು, ಸಿಬ್ಬಂದಿ ವರ್ಗ ಹಾಗು ಷೇರುದಾರ ಬಾಂಧವರು
**ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್.**

ಗೌರವಾಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ, ಸಹ ಕಾರ್ಯದರ್ಶಿ, ಖಜಾಂಚಿ, ಯೋಜನಾ ಛೇರ್ಮನ್, ಛೇರ್ಮನ್‌ಗಳು, ಟ್ರಸ್ಟಿಗಳು, ಮ್ಯಾನೇಜರ್, ಪ್ರಾಚಾರ್ಯರು, ಮುಖ್ಯೋಪಾಧ್ಯಾಯರು, ಬೋಧಕ-ಬೋಧಕೇತರ ಸಿಬ್ಬಂದಿ ವರ್ಗ ಹಾಗು ವಿದ್ಯಾರ್ಥಿಗಳು,
**ಶ್ರೀ ಕನ್ನಿಕಾಪರಮೇಶ್ವರಿ ದೇವಸ್ಥಾನ ಡೈಮಂಡ್ ಜ್ಯೂಬಿಲಿ ವಿದ್ಯಾಪೀಠ (ರಿ.),** ದಾವಣಗೆರೆ.

# ಬಿಜೆಪಿಯ ಗೆಲುವಿನ ನಾಗಾಲೋಟ ತಡೆಯಲು ಯಾರಿಂದಲೂ ಸಾಧ್ಯವಿಲ್ಲ

## ಉಪ ಚುನಾವಣೆಯಲ್ಲಿ ಗೆಲುವು ನಮ್ಮದೇ : ವಿಜಯೇಂದ್ರ ವಿಶ್ವಾಸ



ದಾವಣಗೆರೆ, ಮಾ. 31- ಬಿಜೆಪಿಯ ಗೆಲುವಿನ ನಾಗಾಲೋಟ ತಡೆಯಲು ಯಾವುದೇ ಪಕ್ಷದಿಂದ ಸಾಧ್ಯವಿಲ್ಲ. ಉಪ ಚುನಾವಣೆಯಲ್ಲೂ ಬಿಜೆಪಿ ಜಯದ ನಾಗಾಲೋಟ ಮುಂದುವರೆಸಲಿದೆ ಎಂದು ಸಿಎಂ ಯಡಿಯೂರಪ್ಪ ಅವರ ಪುತ್ರ ಹಾಗೂ ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಗರಕ್ಕೆ ಖಾಸಗಿ ಕಾರ್ಯಕ್ರಮಕ್ಕೆ ಆಗಮಿಸಿದ್ದ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಹಿಂದಿನ ಉಪ ಚುನಾವಣೆಯಲ್ಲಿ 17 ಕ್ಷೇತ್ರಗಳ ಪೈಕಿ 15 ಕ್ಷೇತ್ರಗಳಲ್ಲಿ ಬಿಜೆಪಿ ಜಯಭೇರಿ ಭಾರಿಸಿದ್ದು, ಹಿಂದೆ ಯಾರೂ ಕೂಡ ಊಹಿಸಿರಲಿಲ್ಲ. ಈಗಿನ ಉಪ ಚುನಾವಣೆಗಳಲ್ಲೂ ನಾವೇ ಗೆಲ್ಲುತ್ತೇವೆ ಎಂದು ತಿಳಿಸಿದರು.

**ಬೆಳಗಾವಿ ಉಪಚುನಾವಣೆಗೆ ಸಿಡಿ ಪರಿಣಾಮ ಬೀರದು:** ಬೆಳಗಾವಿ ಉಪಚುನಾವಣೆ ಮೇಲೆ ಸಿಡಿ ಪ್ರಕರಣ ಯಾವುದೇ ಪರಿಣಾಮ ಬೀರುವುದಿಲ್ಲ. ಬೆಳಗಾವಿಯಲ್ಲಿ ದೊಡ್ಡ ಅಂತರದಲ್ಲಿ ಗೆಲ್ಲುತ್ತೇವೆ. ಅಭಿವೃದ್ಧಿ ಆಧಾರದ ಮೇಲೆ ನಾಯಕತ್ವದ ಆಧಾರದ ಮೇಲೆ ಬೆಳಗಾವಿ ಗೆಲ್ಲುತ್ತೇವೆ. ಯಾವುದೇ ಪ್ರಕರಣಗಳು ಚುನಾವಣೆ ಮೇಲೆ ಪ್ರಭಾವ ಬೀರೋಲ್ಲ ಎಂದು ಹೇಳಿದರು.

**ಶೀಘ್ರವೇ ಸಿಡಿ ಪ್ರಕರಣ ಸತ್ಯಾಸತ್ಯತೆ:** ಸಿಡಿ ಲೇಡಿ ಪ್ರಕರಣದ ಬಗ್ಗೆ ವಿಜಯೇಂದ್ರ ಪ್ರತಿಕ್ರಿಯಿಸಿ, 28 ದಿನಗಳಿಂದ ನಾನಾ ರೀತಿಯ ಚರ್ಚೆಗಳು ನಡೆಯುತ್ತಲೇ ಇವೆ. ಇದರ ಹಿಂದೆ ರಾಜಕೀಯ ಪಿತೂರಿ ಇದೆ ಎಂದು ಬಹಳಷ್ಟು ಜನ ಅಭಿಪ್ರಾಯಪಟ್ಟಿದ್ದಾರೆ. ಸಿ.ಡಿ ಯುವತಿಗೆ ಬೆದರಿಗೆ ಇರುವ ವಿಚಾರದ ಬಗ್ಗೆ ನನಗೆ ಮಾಹಿತಿ ಇಲ್ಲ. ಮುಂದಿನ ದಿನಗಳಲ್ಲಿ ಸದ್ಯದಲ್ಲೇ ಇಡೀ ಪ್ರಕರಣದ ಸತ್ಯಾ ಸತ್ಯತೆ ಹೊರ ಬರಲಿದೆ. ಒಂದು ಕಡೆ ಎಸ್‌ಐಟಿ ತನಿಖೆ ಸಾಗಿದೆ. ಪ್ರಕರಣ ಯಾವ ತಿರುವು ಪಡೆಯುತ್ತದೆಯೋ ಕಾದು ನೋಡೋಣ ಎಂದರು.

**ಮಸ್ಕಿ ಉಪಚುನಾವಣೆಯಲ್ಲಿ ಜಯಭೇರಿ:** ಮಸ್ಕಿ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಉಸ್ತುವಾರಿಯನ್ನು ನಾನು ಸೇರಿದಂತೆ ಸಚಿವರಾದ ಶ್ರೀರಾಮುಲು, ರವಿಕುಮಾರ್ ಹೊತ್ತಿದ್ದೇವೆ. ನಾವೆಲ್ಲರೂ ಒಗ್ಗಟ್ಟಾಗಿ ಚುನಾವಣೆಯನ್ನು ಎದುರಿಸುತ್ತಿದ್ದೇವೆ. ಮಸ್ಕಿ ಕ್ಷೇತ್ರದ ಜನರು ಕೈಬಿಡುವುದಿಲ್ಲವೆಂಬ ವಿಶ್ವಾಸ, ನಂಬಿಕೆ ಇದೆ. ಮಸ್ಕಿಯಲ್ಲಿ ಪ್ರತಾಪ ಗೌಡ ವಿಜಯಭೇರಿ ಭಾರಿಸಲಿದ್ದಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

**ಯತ್ನಾಳ್ ಹೇಳಿಕೆಗೆ ತಲೆಕೆಡಿಸಿಕೊಳ್ಳಲ್ಲ:** ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಆರೋಪಗಳಿಗೆ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ. ಬಿಜೆಪಿಯ ರಾಜ್ಯ ಉಪಾಧ್ಯಕ್ಷ ಜವಾಬ್ದಾರಿಯನ್ನು ಪಕ್ಷ ನನಗೆ ನೀಡಿದೆ. ಇಂತಹ ಟೀಕೆ, ಆರೋಪಗಳ ಬಗ್ಗೆ ಗಮನ ಕೊಡುವುದಿಲ್ಲ. ಪಕ್ಷದ ರಾಷ್ಟ್ರೀಯ ನಾಯಕರು, ರಾಜ್ಯ ನಾಯಕರು ಎಲ್ಲಾ ಗಮನಿಸುತ್ತಿದ್ದಾರೆ. ಪಕ್ಷ ಸಂಘಟನೆಗೆ ಯಾವುದೇ ರೀತಿಯ ಹಿನ್ನಡೆಯೂ ಆಗುವುದಿಲ್ಲ ಎಂದರು.

# ಸಮಾರಂಭಗಳಿಗೆ ಅನುಮತಿ ಕಡ್ಡಾಯ

ದಾವಣಗೆರೆ, ಮಾ.31- ಕೋವಿಡ್ – 19 ಪ್ರಕರಣಗಳ ಎರಡನೇ ಅಲೆಯ ಅಪಾಯವನ್ನು ನಿಯಂತ್ರಿಸುವ ನಿಟ್ಟಿನಲ್ಲಿ ವಿವಿಧ ಸಭೆ ಸಮಾರಂಭಗಳು ಹಾಗೂ ಆಚರಣೆಗಳನ್ನು ಮಾಡುವ ಪೂರ್ವದಲ್ಲಿ ಸಾರ್ವಜನಿಕರು ಸಕ್ಷಮ ಪ್ರಾಧಿಕಾರಗಳಿಂದ ಅನುಮತಿ ಪಡೆಯುವುದು ಕಡ್ಡಾಯವಾಗಿದೆ.

ವಿವಿಧ ಸಂದರ್ಭಗಳಲ್ಲಿ ಸಮಾರಂಭಗಳು, ಆಚರಣೆಗಳಲ್ಲಿ ಸಾರ್ವಜನಿಕರಿಗೆ ಅವಕಾಶ ನೀಡಬಹುದಾದ ಸಂಖ್ಯೆಯನ್ನು ಮೀರದಂತೆ ಅಗತ್ಯ ಮಾನದಂಡಗಳನ್ನು ಅನುಸರಿಸಿ, ಸಾರ್ವಜನಿಕರಿಗೆ ಅವಕಾಶ ನೀಡಲು ಸರ್ಕಾರ ಸೂಚಿಸಿರುವ ಹಿನ್ನೆಲೆಯಲ್ಲಿ ಸಕ್ಷಮ ಪ್ರಾಧಿಕಾರಗಳು ಅನುಮತಿ ನೀಡಲಿವೆ.

ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಡೆಯುವ ಸಭೆ, ಸಮಾರಂಭ ಮತ್ತು ಸಾರ್ವಜನಿಕರು ಸೇರುವ ಇತರೆ ಕಾರ್ಯಕ್ರಮಗಳಿಗೆ ಆಯುಕ್ತರು, ಮಹಾನಗರ ಪಾಲಿಕೆ ಈ ಪ್ರಾಧಿಕಾರದಿಂದ ಅನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ.

ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ನಡೆಯುವ ಸಭೆ-ಸಮಾರಂಭಗಳಿಗೆ ಆಯುಕ್ತರು, ಪೌರಾಯುಕ್ತರು, ಮುಖ್ಯಾಧಿಕಾರಿಗಳ ಅನುಮತಿ ಪಡೆಯುವುದು ಕಡ್ಡಾಯವಾಗಿದೆ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಅನುಮತಿ ಪಡೆಯುವುದು ಕಡ್ಡಾಯವಾಗಿದೆ.

ಕೋವಿಡ್ – 19 ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಕಡ್ಡಾಯಗೊಳಿಸಲಾಗಿದೆ. ವಿವಿಧ ಸಮಾರಂಭಗಳು ಹಾಗೂ ಆಚರಣೆಗಳ ಸಂದರ್ಭದಲ್ಲಿ ಹೆಚ್ಚು ಸಾರ್ವಜನಿಕರು ಗುಂಪು ಸೇರುವ ಹಿನ್ನೆಲೆಯಲ್ಲಿ ಸೋಂಕು ಹರಡುವ ಅಪಾಯ ಹೆಚ್ಚಿರುತ್ತದೆ. ಆದ್ದರಿಂದ ಸಮಾರಂಭದ ಪೂರ್ವದಲ್ಲಿ ಮೇಲ್ಕಂಡ ಪ್ರಾಧಿಕಾರಗಳಿಂದ ಅನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ. ತಪ್ಪಿದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

# ವಸತಿ ಪ್ರದೇಶದಲ್ಲಿ ವಿದ್ಯಾರ್ಥಿಗಳ ಪಾರ್ಕಿಂಗ್ ಸಮಸ್ಯೆ

## ಪಾರ್ಕಿಂಗ್ ವ್ಯವಸ್ಥೆ ಮಾಡಿಕೊಳ್ಳದ ಕಾಲೇಜುಗಳಿಂದ ಬಡಾವಣೆ ನಿವಾಸಿಗಳಿಗೆ ತೊಂದರೆ: ಅಸಮಾಧಾನ

ದಾವಣಗೆರೆ, ಮಾ.31- ನಗರದ ವಿವಿಧ ಬಡಾವಣೆಗಳ ವಸತಿ ಪ್ರದೇಶಗಳಲ್ಲಿ ಮೂಲ ಸೌಕರ್ಯಗಳನ್ನು ಕಲ್ಪಿಸದೆ ನಡೆಸಲಾಗುತ್ತಿರುವ ಕಾಲೇಜುಗಳು ಬಡಾವಣೆಗಳ ನಾಗರಿಕರ ನೆಮ್ಮದಿ ಕಸಿದುಕೊಳ್ಳುತ್ತಿವೆ.

ಕಾಲೇಜುಗಳಲ್ಲಿ ಉತ್ತಮ ಶೈಕ್ಷಣಿಕ ವಾತಾವರಣ ನಿರ್ಮಾಣವಾಗಬೇಕಾದರೆ ಮೂಲ ಭೂತ ಸೌಕರ್ಯಗಳು ಅತಿ ಮುಖ್ಯ. ಆದರೆ ನಗರದ ಬಹುತೇಕ ಕಾಲೇಜುಗಳು ಸರ್ಕಾರದ ನಿಯಮಗಳನ್ನು ಪಾಲಿಸುತ್ತಿಲ್ಲ ಎಂಬುದು ಸಾರ್ವಜನಿಕರ ಆರೋಪವಾಗಿದೆ.

ಕಾಲೇಜುಗಳು ಸುಸಜ್ಜಿತ ಕಟ್ಟಡದೊಂದಿಗೆ ಪ್ರಯೋಗಾಲಯ, ಗ್ರಂಥಾಲಯ ಇತ್ಯಾದಿ ಮೂಲಭೂತ ಸೌಕರ್ಯಗಳ ಜೊತೆಗೆ ಮುಖ್ಯವಾಗಿ ಪಾರ್ಕಿಂಗ್ ವ್ಯವಸ್ಥೆ ಹೊಂದಿರಬೇಕು. ಆದರೆ ಅನೇಕ ಕಾಲೇಜುಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಇಲ್ಲದ ಕಾರಣ, ವಿದ್ಯಾರ್ಥಿಗಳು ಹತ್ತಿರದ ಖಾಲಿ ನಿವೇಶನಗಳು, ನಿವಾಸಿಗಳ ಮನೆಗಳ ಮುಂದೆ ಅಥವಾ ರಸ್ತೆಗಳಲ್ಲಿ ತಮ್ಮ ವಾಹನಗಳನ್ನು ನಿಲುಗಡೆ ಮಾಡುತ್ತಿದ್ದಾರೆ. ಇದು ಸ್ಥಳೀಯ ನಿವಾಸಿಗಳಿಗೆ ಕಿರಿ ಕಿರಿ ಎನಿಸಲಾರಂಭಿಸಿದೆ. ಇದೀಗ ನಗರದ ಹದಡಿ ರಸ್ತೆಯಲ್ಲಿರುವ ಸರ್.ಎಂ.ವಿ. ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಂದ ಉಂಟಾಗುತ್ತಿರುವ ತೊಂದರೆಗಳ ಬಗ್ಗೆ ಶಿವಕುಮಾರ ಸ್ವಾಮಿ ಬಡಾವಣೆಯ ಈಶ್ವರ ವಿನಾಯಕ ಟ್ರಸ್ಟ್ ಪದಾಧಿಕಾರಿಗಳು ತಮ್ಮ ಅಸಮಾಧಾನ ಹೊರ ಹಾಕಿದ್ದಾರೆ.

ಕಾಲೇಜಿನ ಬಸ್‌ಗಳು, ಕಾರುಗಳು ಹಾಗೂ ವಿದ್ಯಾರ್ಥಿಗಳು ತರುವ ನೂರಾರು ಬೈಕ್‌ಗಳಿಗೆ ಕಾಲೇಜು ಯಾವುದೇ ಪಾರ್ಕಿಂಗ್ ವ್ಯವಸ್ಥೆ ಮಾಡಿಕೊಂಡಿಲ್ಲ. ಪರಿಣಾಮ ಬಡಾವಣೆ ನಿವಾಸಿಗಳ ಮನೆಗಳ ಮುಂದೆ, ಖಾಲಿ ನಿವೇಶನಗಳಲ್ಲಿ ಬೆಳಿಗ್ಗೆಯಿಂದ ರಾತ್ರಿವರೆಗೆ ಪಾರ್ಕಿಂಗ್ ಮಾಡುತ್ತಿದ್ದಾರೆ ಎಂದು ಬಡಾವಣೆ ನಿವಾಸಿಗಳು ದೂರಿದ್ದಾರೆ.

ಕಾಲೇಜು ವಿದ್ಯಾರ್ಥಿಗಳ ಹಾರನ್ ಸದ್ದು ಬಡಾವಣೆಯ ವೃದ್ಧರಿಗೆ, ಮಹಿಳೆಯರಿಗೆ ಕಿರಿ ಕಿರಿ ಎನಿಸುತ್ತಿದೆ. ಅಲ್ಲದೆ ಅತಿ ವೇಗದಲ್ಲಿ ತಮ್ಮ ದ್ವಿಚಕ್ರ ವಾಹನ ಓಡಿಸುವ ವಿದ್ಯಾರ್ಥಿಗಳಿಂದ ಮನೆಗಳ ಮುಂದೆ ಆಟವಾಡುವ ಚಿಕ್ಕ ಚಿಕ್ಕ ಮಕ್ಕಳನ್ನು ರಕ್ಷಿಸಿಕೊಳ್ಳುವುದೇ ತಲೆನೋವಾಗಿ ಪರಿಣಮಿಸಿದೆ ಎನ್ನುವುದು ಗೃಹಿಣಿಯರ ದೂರು.

ಇನ್ನು ದಾರಿ ಮಧ್ಯೆದಲ್ಲಿಯೇ ಗುಂಪು ಗುಂಪಾಗಿ ಹರಟೆ ಹೊಡೆಯುತ್ತಾ ನಿಲ್ಲುವ ವಿದ್ಯಾರ್ಥಿಗಳಿಗೆ ನಮ್ಮ ವಾಹನದ ಹಾರನ್ ಕೇಳಿಸದು. ಕೇಳಿದರೂ ಅಸಡ್ಡೆ ಮಾಡುವವರಿಗೆ ಬುದ್ದಿ ಹೇಳ ಹೊರಟರೆ ವಿದ್ಯಾರ್ಥಿಗಳ ತಲೆ ಪ್ರತಿಷ್ಠೆ ಮಾತುಗಳನ್ನು ಕೇಳಬೇಕಾಗುತ್ತದೆ. ಕಾಲೇಜು ದಾಖಲಾತಿ ಆರಂಭವಾದ ಸಮಯದಲ್ಲಂತೂ ನಾವು ಮನೆ ಸೇರುವುದು ಕಷ್ಟ. ಅಷ್ಟರ ಮಟ್ಟಿಗೆ ವಿದ್ಯಾರ್ಥಿಗಳು, ಪೋಷಕರು ಹಾಗೂ ವಾಹನಗಳ ಸಂಖ್ಯೆ ಹೆಚ್ಚಾಗಿರುತ್ತದೆ. ಆದ್ದರಿಂದ ನಮ್ಮ ಖಾಲಿ ನಿವೇಶನಗಳಿಗೆ ನಾವೇ ಬೇಲಿ ಹಾಕಿಕೊಂಡಿದ್ದೇವೆ ಎನ್ನುತ್ತಾರೆ ಶಿವಕುಮಾರ ಸ್ವಾಮಿ ಬಡಾವಣೆಯ ನಿವಾಸಿಯೊಬ್ಬರು.

ವಿದ್ಯಾರ್ಥಿಗಳ ಪಾರ್ಕಿಂಗ್ ಸಮಸ್ಯೆ ಒಂದು ರೀತಿಯ ತಲೆನೋವಾದರೆ, ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಕರೆ ತರುವ ಬಸ್‌ಗಳಿಗೂ ಸಮರ್ಪಕವಾಗಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿಕೊಂಡಿಲ್ಲ. ಖಾಲಿ ನಿವೇಶನಗಳಲ್ಲಿ ಬಸ್ ಪಾರ್ಕಿಂಗ್ ಮಾಡುವ ಇವರು, ನಂತರ ಅಲ್ಲಿಯೇ ರಿಪೇರಿ ಮಾಡುತ್ತಾ, ನಿವೇಶನವನ್ನು ತಾತ್ಕಾಲಿಕ ಗ್ಯಾರೇಜ್ ಆಗಿ ಪರಿವರ್ತಿಸಿಕೊಳ್ಳುತ್ತಿದ್ದಾರೆ ಎಂಬುದು ಮತ್ತೊಂದು ಆರೋಪ.

ಕೊರೊನಾ ಪೂರ್ವದಲ್ಲಿ ನಗರದ ಬಡಾವಣೆಗಳಲ್ಲಿದ್ದ ಜನಸಂಖ್ಯೆ ಕೊರೊನಾ ನಂತರ ತುಸು ಹೆಚ್ಚಾಗಿದೆ. ಸೋಂಕು ಹರಡುವಿಕೆ, ಲಾಕ್‌ಡೌನ್ ಮತ್ತಿತರೆ ಕಾರಣಗಳಿಂದಾಗಿ ಹೊರ ಜಿಲ್ಲೆ, ರಾಜ್ಯಗಳಲ್ಲಿ ಕೆಲಸಕ್ಕೆ ತೆರಳಿದ್ದ ಸ್ಥಳೀಯರು ಇದೀಗ ವರ್ಕ್ ಫ್ರಂ ಹೋಂ ಕಾರಣದಿಂದ ತಾವು ಬಳಸುವ ದ್ವಿಚಕ್ರ, ನಾಲ್ಕು ಚಕ್ರದ ವಾಹನಗಳೊಂದಿಗೆ ಮನೆಗೆ ಮರಳಿದ್ದಾರೆ. ಪರಿಣಾಮ ಬಡಾವಣೆಗಳಲ್ಲೂ ವಾಹನಗಳ ಸಂಖ್ಯೆ ಹೆಚ್ಚಾಗಿದೆ. ಏತನ್ಮಧ್ಯೆ ವಿದ್ಯಾರ್ಥಿಗಳ ಪಾರ್ಕಿಂಗ್ ಸಮಸ್ಯೆ ನಾಗರಿಕರ ಅಳಲು.

ಒಟ್ಟಿನಲ್ಲಿ ವಸತಿ ಪ್ರದೇಶದಲ್ಲಿ ಕನಿಷ್ಟ ಮೂಲ ಸೌಕರ್ಯಗಳಿಲ್ಲದ ಅನೇಕ ಕಾಲೇಜುಗಳಿಂದ ನಿವಾಸಿಗಳು ತೊಂದರೆ ಅನುಭವಿಸುವಂತಾಗಿದೆ. ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಳ್ಳಬೇಕಿದೆ. ಜೊತೆಗೆ ವಾರ್ಡ್‌ಗಳ ಪಾಲಿಕೆ ಸದಸ್ಯರು ಸ್ಥಳೀಯರ ಸಮಸ್ಯೆಗಳಿಗೆ ಸ್ಪಂದಿಸುವ ಕಾರ್ಯಕ್ಕೆ ಮುಂದಾಗಬೇಕಿದೆ.



ಶಿವಕುಮಾರ ಸ್ವಾಮಿ ಬಡಾವಣೆ ನಿವಾಸಿಗಳು ವಾಹನಗಳ ನಿಲುಗಡೆಗೆ ವಿರೋಧಿಸಿದ್ದರಿಂದ ಇದೀಗ ಸರ್ ಎಂ.ವಿ. ಕಾಲೇಜು ವಿದ್ಯಾರ್ಥಿಗಳು ತರಳಬಾಳು ಬಡಾವಣೆಯಲ್ಲಿ ನಿಲುಗಡೆ ಮಾಡುತ್ತಿದ್ದಾರೆ.






ಶಿವಕುಮಾರ ಸ್ವಾಮಿ ಬಡಾವಣೆಯ ಖಾಲಿ ನಿವೇಶನದಲ್ಲಿ ಕಾಲೇಜು ಬಸ್ ನಿಲುಗಡೆ ಮಾಡಿರುವುದು. ಪಾರ್ಕಿಂಗ್ ಮಾಡದಂತೆ ಸ್ಥಳೀಯರು ನಾಮಫಲಕ ಹಾಕಿರುವುದು.

# ತೆರೆದ ಮನಸ್ಸಿನಿಂದ ಬಜೆಟ್ ಒಪ್ಪಿಕೊಳ್ಳಲಿ

## ಸಿದ್ದರಾಮಯ್ಯ ಅವರಿಗೆ ಸಂಸದ ಬಿ.ವೈ.ರಾಘವೇಂದ್ರ ಟಾಂಗ್



ದಾವಣಗೆರೆ, ಮಾ.31- ರಾಜ್ಯದ ಆರ್ಥಿಕ ಸ್ಥಿತಿ ದಿವಾಳಿಯಾಗಿರುವುದಾಗಿ ರಾಜಕಾರಣಕ್ಕಾಗಿ ಟೀಕೆ ಮಾಡಿರುವ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರು ತೆರೆದ ಮನಸ್ಸಿನಿಂದ ಬಜೆಟ್ ಒಪ್ಪಿಕೊಳ್ಳಲಿ ಎಂದು ಶಿವಮೊಗ್ಗ ಲೋಕಸಭಾ ಸದಸ್ಯ ಬಿ.ವೈ. ರಾಘವೇಂದ್ರ ತಿಳಿಸಿದರು.

ನಗರಕ್ಕೆ ಖಾಸಗಿ ಕಾರ್ಯಕ್ರಮದ ನಿಮಿತ್ತ ಆಗಮಿಸಿದ್ದ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿ, ಕೊರೊನಾ ವೈರಸ್‌ನಿಂದಾದ ಲಾಕ್ ಡೌನ್ ಸೇರಿದಂತೆ ಆರ್ಥಿಕ ಸಂಕಷ್ಟ, ಸವಾಲುಗಳ ಮಧ್ಯೆಯೂ ಆದಾಯವೇ ಇಲ್ಲದಿದ್ದರೂ ಆರ್ಥಿಕ ಶಿಸ್ತನ್ನು ಕಾಪಾಡಿಕೊಂಡು, ಜನರಿಗೂ ಹೊರೆಯಾಗದಂತೆ, ಸರ್ಕಾರಕ್ಕೂ ಭಾರವಾಗದಂತಹ ಬಜೆಟ್ಟನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮಂಡಿಸಿದ್ದಾರೆ.

ನಾಡಿನ ಆರ್ಥಿಕ ತಜ್ಞರು, ವಿಮರ್ಶಕರು ಯಡಿಯೂರಪ್ಪ ಅವರ ಬಜೆಟ್ ಮಂಡನೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅತೀ ಹೆಚ್ಚು ಬಜೆಟ್ ಮಂಡನೆ ಮಾಡಿರುವ ಹಿರಿಯರಾದ ವಿಪಕ್ಷ ನಾಯಕ ಸಿದ್ದರಾಮಯ್ಯ ರಾಜ್ಯದ ಆರ್ಥಿಕ ವ್ಯವಸ್ಥೆ ದಿವಾಳಿಯಾಗಿದೆಯೆಂದು ರಾಜಕಾರಣಕ್ಕಾಗಿ ಟೀಕಿಸಿದ್ದು ಸರಿಯಲ್ಲ ಎಂದು ಆಕ್ಷೇಪಿಸಿದರು.

**ಸಿ.ಡಿ. ಪ್ರಕರಣದಿಂದ ಬಿಜೆಪಿಗೆ ಹಾನಿಯಿಲ್ಲ:** ಸಿ.ಡಿ. ಪ್ರಕರಣವನ್ನು ನಾಡಿನ ಜನರು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ಈ ವಿಚಾರಕ್ಕೆ ವಿಧಾನಸಭೆಯಲ್ಲಿ ಒಂದು ದಿನ ಪೂರ್ತಿ ಚರ್ಚೆಯಾಗಿದೆ. ರಾಜಕಾರಣದಲ್ಲಿ ಷಡ್ಯಂತ್ರಗಳು ನಡೆಯುತ್ತಿರುವುದು ಗಮನಾರ್ಹ. ಸಿ.ಡಿ. ಪ್ರಕರಣದಿಂದ ಉಪ ಚುನಾವಣೆಯ ಮೇಲೆ ಯಾವುದೇ ರೀತಿ ಪರಿಣಾಮ ಬೀರುವುದಿಲ್ಲ. ಬಿಜೆಪಿಗೆ ಇದರಿಂದ ಹಾನಿ ಆಗುವುದಿಲ್ಲ ಎಂದರು.

ಅನಾವಶ್ಯಕವಾಗಿ ತೇಜೋವಧೆ ಆಗಬಾರದೆಂಬ ಕಾರಣಕ್ಕೆ ಕೆಲವರು ಕಾನೂನು ಮೊರೆ ಹೋಗಿದ್ದಾರೆ.

ಕಾನೂನು ಚೌಕಟ್ಟಿನಲ್ಲಿ ಕೆಲವರು ನ್ಯಾಯಾಲಯದ ಮೊರೆ ಹೋಗಿರುವುದೇನೂ ತಪ್ಪಲ್ಲ. ಯಾವ ಉದ್ದೇಶಕ್ಕಾಗಿ ತಾವು ತಡೆಯಾಜ್ಞೆ ತಂದಿದ್ದೇವೆಂಬುದಾಗಿಯೂ ನ್ಯಾಯಾಲಯದ ಮೊರೆ ಹೋದವರು ಈಗಾಗಲೇ ಹೇಳಿದ್ದಾರೆ. ಕಾನೂನಿನಲ್ಲಿ ಇದಕ್ಕೆ ಅವಕಾಶವಿದೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಹಿಂದೆಲ್ಲಾ ಚುನಾವಣೆ ಬಂದಾಗ ಮಾತ್ರ ಪಕ್ಷಗಳು, ನಾಯಕರಲ್ಲಿ ಪರ-ವಿರೋಧ ಕಾಣುತ್ತಿತ್ತು. ಆಡಳಿತ-ವಿಪಕ್ಷ ತಮ್ಮ ಜವಾಬ್ದಾರಿ ಅರಿತು, ಅಭಿವೃದ್ಧಿ ಕೆಲಸ ಮಾಡುತ್ತಿದ್ದವು. ಆದರೆ, ಇಂತಹ ದ್ವೇಷದ ರಾಜಕಾರಣ ಹೆಚ್ಚಾಗುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ. ವೈಯಕ್ತಿಕ ವಿಚಾರಗಳಲ್ಲೂ ಕೈ ಹಾಕುತ್ತಿರುವುದು ಒಳ್ಳೆಯದೂ ಅಲ್ಲ. ರಾಜ್ಯದ ಜನತೆ ಇಂತಹದ್ದಕ್ಕೆಲ್ಲಾ ಸೂಕ್ತ ಉತ್ತರವನ್ನೇ ನೀಡಲಿದ್ದಾರೆಂದರು.

# ಗ್ರಾ.ಪಂ. ಚುನಾವಣೆ : 3 ಕಾಂಗ್ರೆಸ್, 2 ಬಿಜೆಪಿ, 1 ಅತಂತ್ರ




ರಾಣೇಬೆನ್ನೂರು, ಮಾ.31 - ಮೊನ್ನೆ ನಡೆದ ತಾಲ್ಲೂಕಿನ ಆರು ಗ್ರಾಮ ಪಂಚಾಯ್ತಿಗಳ ಚುನಾವಣೆಯ ಮತ ಎಣಿಕೆ ಇಂದು ಇಲ್ಲಿನ ರೋಟರಿ ಶಾಲೆಯಲ್ಲಿ ನಡೆದಿದ್ದು, ಮೂರು ಗ್ರಾ.ಪಂಗಳಲ್ಲಿ ಕಾಂಗ್ರೆಸ್ ಬೆಂಬಲಿತರು, ಎರಡರಲ್ಲಿ ಬಿಜೆಪಿ ಬೆಂಬಲಿತರು ಆಡಳಿತ ಹಿಡಿದಿದ್ದು, ಒಂದು ಅತಂತ್ರ ಫಲಿತಾಂಶ ಬಂದಿದೆ.

ಮಾಳನಾಯ್ಕನಹಳ್ಳಿ, ಕುಪ್ಪೇಲೂರು ಮತ್ತು ಅಂತರವಳ್ಳಿ ಕಾಂಗ್ರೆಸ್ ಪಾಲಾದರೆ, ಜೋಯಿಸರಹರಳಹಳ್ಳಿಯ ಒಟ್ಟು 10 ಸ್ಥಾನಗಳಲ್ಲಿ 8 ಬಿಜೆಪಿ ಪಾಲಾಗಿವೆ. ಸುಣಕಲ್ಲಬಿದರಿ 12 ಸ್ಥಾನಗಳಲ್ಲಿ 10 ಬಿಜೆಪಿ ಪಡೆದು ಆಡಳಿತ ಹಿಡಿದಿವೆ.

ತುಮ್ಮಿನಕಟ್ಟೆಯಲ್ಲಿ ಶಾಸಕ ಹಾಗೂ ಸಚಿವರ ಬೆಂಬಲಿಗರು, ಕೆಲವರು ಪಕ್ಷೇತರರಾಗಿ ಕಣದಲ್ಲಿದ್ದರು. ಇಲ್ಲಿ ಕಾಂಗ್ರೆಸ್ ಹೆಚ್ಚು ಸ್ಥಾನ ಗಳಿಸಿದ್ದರೂ ಸಹ ಅಧಿಕಾರ ಹಿಡಿಯಲು ಇನ್ನೊಬ್ಬರ ಆಶ್ರಯದ ಅವಶ್ಯಕತೆ ಇದೆ. ಇಲ್ಲಿ ಸ್ವತಂತ್ರವಾಗಿ ಯಾರೂ ಆಡಳಿತ ನಡೆಸಲಾಗದು ಎಂದು ಹೇಳಲಾಗುತ್ತಿದೆ.

ಜಯ ಗಳಿಸಿದವರು ಬಣ್ಣ ಎರಚಿ ಸಂಭ್ರಮಿಸಿದರು, ಸೋತವರು ಸೋಲಿನ ಲೆಕ್ಕಾಚಾರ ಹಾಕುತ್ತಾ ವಿರೋಧಿಸಿದವರನ್ನು ಶಪಿಸುವ ದೃಶ್ಯಗಳು ಕಂಡು ಬಂದವು. ತಹಶೀಲ್ದಾರ್ ಶಂಕರ್ ಮತ ಎಣಿಕೆಯ ಉಸ್ತುವಾರಿ ವಹಿಸಿದ್ದರು.

# ಜಂಗಮ ಸೌಹಾರ್ದ ಸಹಕಾರಿ ಅಧ್ಯಕ್ಷರಾಗಿ ಎನ್.ಎಂ. ಬಸವರಾಜಯ್ಯ



ದಾವಣಗೆರೆ, ಮಾ.31 -ನಗರದ ಜಂಗಮ ಸೌಹಾರ್ದ ಸಹಕಾರಿಯ ನೂತನ ಅಧ್ಯಕ್ಷರಾಗಿ ಎನ್.ಎಂ. ಬಸವರಾಜಯ್ಯ ಅವಿರೋಧವಾಗಿ ಆಯ್ಕೆಯಾಗಿದ್ದು, ಉಪಾಧ್ಯಕ್ಷರಾಗಿ ಇಂದೂಧರ ನಿಶಾನಿಮಠ ಇವರು ಮುಂದುವರೆದಿದ್ದಾರೆ.

# ದಾವಣಗೆರೆ ತಾಲ್ಲೂಕಿನ ಮೂರು ಗ್ರಾ.ಪಂ.ಗಳ ಫಲಿತಾಂಶ ಪ್ರಕಟ

**(1ನೇ ಪುಟದಿಂದ)** (242) ಆಯ್ಕೆಯಾಗಿದ್ದಾರೆ.

ಕುಕ್ಕುವಾಡ – 2 ಕ್ಷೇತ್ರದಿಂದ ನಡೆದ ಚುನಾವಣೆಗೆ ಕೆ.ಎಂ. ನಯಾಜ್ ಹಿಂದುಳಿದ ಅ ವರ್ಗ (276), ಸೌಭಾಗ್ಯಮ್ಮ – ಸಾಮಾನ್ಯ ಮಹಿಳೆ (634), ಪರಮೇಶ್ವರಪ್ಪ – ಸಾಮಾನ್ಯ(512) ಆಯ್ಕೆಯಾಗಿದ್ದಾರೆ.

ಕುಕ್ಕುವಾಡದ ಹೊನ್ನಮರಡಿ ಕ್ಷೇತ್ರದಿಂದ ಕೆ.ಎಂ. ಸುಧಾ- ಎಸ್.ಟಿ. ಮಹಿಳೆ (494), ಮಂಜುಳ ವೈ. - ಸಾಮಾನ್ಯ ಮಹಿಳೆ (352) ಹಾಗೂ ಪಿ.ಕೆ. ಸುನೀಲ್ ಕುಮಾರ್ - ಸಾಮಾನ್ಯ (530) ಆಯ್ಕೆಯಾಗಿದ್ದಾರೆ.

ಕುಕ್ಕುವಾಡದ ನಾಗರಸನಹಳ್ಳಿ ಕ್ಷೇತ್ರದಿಂದ ನಡೆದ ಚುನಾವಣೆಯಲ್ಲಿ ಎನ್.ಎಸ್. ಪ್ರದೀಪ್ - ಅನುಸೂಚಿತ ಜಾತಿ (281) ಹಾಗೂ ಲಕ್ಷ್ಮಿ ಬಿ. ಹೆಚ್. ಶಂಕರಾಚಾರ್ ಹಿಂದುಳಿದ ಅ ವರ್ಗ (416) ಆಯ್ಕೆಯಾಗಿದ್ದಾರೆ.

ಬೇತೂರು ಗ್ರಾಮ ಪಂಚಾಯ್ತಿಯ ಬೇತೂರು - 1 ಕ್ಷೇತ್ರದಲ್ಲಿ ಚಂದ್ರಪ್ಪ – ಹಿಂದುಳಿದ ಅ ವರ್ಗ (446), ಸೌಭಾಗ್ಯ – ಸಾಮಾನ್ಯ ಮಹಿಳೆ (515) ಹಾಗೂ ಎಂ.ಎಸ್. ಮಂಜುನಾಥ – ಸಾಮಾನ್ಯ (543). ಬೇತೂರು - 2 ಕ್ಷೇತ್ರದಲ್ಲಿ ಅಂಜಮ್ಮ - ಎಸ್‌ಸಿ ಮಹಿಳೆ (428), ಜಯ್ಯಮ್ಮ – ಸಾಮಾನ್ಯ ಮಹಿಳೆ (459) ಹಾಗೂ ಬಿ. ಶಿವಕುಮಾರ – ಸಾಮಾನ್ಯ (526) ಗೆದ್ದಿದ್ದಾರೆ.

ಬೇತೂರು - 3 ಕ್ಷೇತ್ರದಲ್ಲಿ ಶಾಂತಮ್ಮ – ಎಸ್.ಟಿ. ಮಹಿಳೆ (468), ಎ. ಲತಾ - ಹಿಂದುಳಿದ ಅ ವರ್ಗ ಮಹಿಳೆ (441), ಕೆ.ಸಿ. ಸುಮ – ಸಾಮಾನ್ಯ ಮಹಿಳೆ (543), ಹೆಚ್.ಎಸ್. ಚೇತನಕುಮಾರ – ಸಾಮಾನ್ಯ (581) ಗೆದ್ದಿದ್ದಾರೆ.

ಬಿ. ಕಲ್ಪನಹಳ್ಳಿಯಲ್ಲಿ ಪರಮೇಶ್ವರಪ್ಪ – ಎಸ್.ಸಿ. (342), ಜಿ.ಬಿ. ಬಸವರಾಜ – ಎಸ್.ಟಿ. (419), ಶಾಂತಮ್ಮ – ಸಾಮಾನ್ಯ ಮಹಿಳೆ (524), ಕೆ.ಎಂ. ರೇವಣಸಿದ್ದಪ್ಪ – ಸಾಮಾನ್ಯ (629) ಗೆದ್ದಿದ್ದಾರೆ.

ಬಿ. ಚಿತ್ತಾನಹಳ್ಳಿಯಲ್ಲಿ ಚೌಡಮ್ಮ – ಎಸ್.ಸಿ. ಮಹಿಳೆ (314), ಟಿ. ರೇಣುಕಮ್ಮ – ಎಸ್.ಟಿ. ಮಹಿಳೆ (311), ಜಿ.ಎನ್. ಹುಚ್ಚಪ್ಪ – ಸಾಮಾನ್ಯ (435).


ಕನಗೊಂಡನಹಳ್ಳಿ ಗ್ರಾಮ ಪಂಚಾಯ್ತಿಗೆ ನಡೆದ ಚುನಾವಣೆಯಲ್ಲಿ ಕನಗೊಂಡನಹಳ್ಳಿ ಕ್ಷೇತ್ರದಿಂದ ಗಂಗಮ್ಮ – ಎಸ್.ಸಿ. ಮಹಿಳೆ (556), ಕೆ. ಆರ್. ಗಮೇಶ – ಬಿಸಿಎಂಎ (581), ಎಂ.ವಿ. ಗೀತಮ್ಮ – ಸಾಮಾನ್ಯ ಮಹಿಳೆ (611), ಕೆ.ಹೆಚ್. ಬಸವರಾಜಪ್ಪ - ಸಾಮಾನ್ಯ (532).

ಬಲ್ಲೂರು ಕ್ಷೇತ್ರದಿಂದ ಸವಿತ ಆರ್. - ಬಿ.ಸಿ.ಎಂ. ಎ – ಮಹಿಳೆ (563), ಶೈಲಜ – ಬಿಸಿಎಂ - ಬಿ ಮಹಿಳೆ (437), ಮಹೇಶ್ವರಪ್ಪ ರೆಡ್ಡಿ - ಸಾಮಾನ್ಯ (623), ಕೆ. ವಿರೂಪಾಕ್ಷಪ್ಪ – ಸಾಮಾನ್ಯ (477) ಗೆದ್ದಿದ್ದಾರೆ.

ಕೊಳೇನಹಳ್ಳಿ ಚುನಾವಣಾ ಕ್ಷೇತ್ರದಿಂದ ಎಂ. ಹಾಲಮ್ಮ – ಎಸ್.ಟಿ. ಮಹಿಳೆ (326), ಜಲಜಾಕ್ಷಮ್ಮ – ಸಾಮಾನ್ಯ ಮಹಿಳೆ (589), ನಾಗರಾಜ ಯು. ಅಮತಿ - ಸಾಮಾನ್ಯ (503) ಆಯ್ಕೆಯಾಗಿದ್ದಾರೆ. ಗಂಗಮ್ಮ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಜಡಗನಹಳ್ಳಿ ಕ್ಷೇತ್ರದಿಂದ ಜಿ.ಎಂ. ಬಸವರಾಜ – ಬಿಸಿಎಂಎ (201) ಹಾಗೂ ಎಂ.ಬಿ. ಗುತ್ಯಪ್ಪ – ಸಾಮಾನ್ಯ (197) ಆಯ್ಕೆಯಾಗಿದ್ದಾರೆ.

# ಯಕ್ಕನಹಳ್ಳಿಯಲ್ಲಿ ನಾಳೆ ರಾಯಣ್ಣ ಪ್ರತಿಮೆ ಅನಾವರಣ



ಹೊನ್ನಾಳಿ, ಮಾ.31- ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಸುಮಾರು 8.5 ಅಡಿ ಎತ್ತರದ 9 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಗಿರುವ ಸುಂದರ ಕಂಚಿನ ಪ್ರತಿಮೆಯನ್ನು ತಾಲ್ಲೂಕಿನ ಯಕ್ಕನಹಳ್ಳಿಯಲ್ಲಿ ಏ.2 ರಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅನಾವರಣಗೊಳಿಸಲಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ ಹೇಳಿದರು.

ಅವರು ಬುಧವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಏಪ್ರಿಲ್ 2ರ ಶುಕ್ರವಾರ ಸಿದ್ದರಾಮಯ್ಯ ಅವರು ಹೆಲಿಕ್ಯಾಪ್ಟರ್ ಮೂಲಕ ಹೊನ್ನಾಳಿಗೆ ಆಗಮಿಸಿ, ಇಲ್ಲಿಂದ ಯಕ್ಕನಹಳ್ಳಿಗೆ ರಸ್ತೆ ಮೂಲಕ ಪ್ರಯಾಣಿಸಿ ಯಕ್ಕನಹಳ್ಳಿಯ ಬೀರಲಿಂಗೇಶ್ವರ ಸಮುದಾಯ ಭವನದಲ್ಲಿ ಬೆಳಗ್ಗೆ 11.30 ಕ್ಕೆ ಪ್ರತಿಮೆ ಲೋಕಾರ್ಪಣೆ ಮಾಡಲಿದ್ದು, ನಂತರ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ ಎಂದರು.

ಅಧ್ಯಕ್ಷತೆಯನ್ನು ಶ್ರೀ ಬೀರಲಿಂಗೇಶ್ವರ ಟ್ರಸ್ಟ್ ಕಮಿಟಿ ಯಕ್ಕನಹಳ್ಳಿಯ ಅಧ್ಯಕ್ಷ ಬಿ. ಕರಿಬಸಪ್ಪ ವಹಿಸಲಿದ್ದಾರೆ ಎಂದರು.

ಸಾನ್ನಿಧ್ಯವನ್ನು ಕಾಗಿನೆಲೆ ಕನಕ ಗುರುಪೀಠದ ಶಾಖಾ ಮಠ ಮೈಸೂರು ವಿಭಾಗದ ಶ್ರೀ ಶಿವಾನಂದ ಪುರಿ ಸ್ವಾಮೀಜಿ, ಹದಡಿ ಚಂದ್ರಗಿರಿ ಮಠದ ಸದ್ಗುರು ಮುರಳೀಧರ ಸ್ವಾಮೀಜಿ, ಸಿದ್ಧಾರೂಢ ಮಠ ಯಕ್ಕನಹಳ್ಳಿ ಇದರ ಅಧ್ಯಕ್ಷ ಬಿ. ಬಸವರಾಜಪ್ಪ ಭಾಗವಹಿಸಲಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಶಾಸಕ ಶಾಮನೂರು ಶಿವಶಂಕರಪ್ಪ, ಶಾಸಕ ಭೈರತಿ ಸುರೇಶ್, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಹೊನ್ನಾಳಿ ಕ್ಷೇತ್ರದ ಶಾಸಕ ಎಂ.ಪಿ.ರೇಣುಕಾಚಾರ್ಯ, ಮಾಜಿ ಸಚಿವರಾದ ಹೆಚ್.ಎಂ. ರೇವಣ್ಣ, ಹೆಚ್.ಆಂಜನೇಯ, ವಿಧಾನ ಪರಿಷತ್ ಸದಸ್ಯ ಆರ್.ಪ್ರಸನ್ನಕುಮಾರ್, ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕರಾದ ಡಿ.ಜಿ. ಶಾಂತನಗೌಡ, ಬಿ.ಜಿ.ಗೋವಿಂದಪ್ಪ, ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಕೆಂಗೋ ಹನುಮಂತಪ್ಪ, ಜಬ್ಬಾರ್ ಸಾಬ್, ಸೇರಿದಂತೆ ಜಿಲ್ಲಾ ಮತ್ತು ತಾಲ್ಲೂಕು ಕುರುಬರ ಸಂಘದ ಪದಾಧಿಕಾರಿಗಳು, ಯಕ್ಕನಹಳ್ಳಿ ಗ್ರಾಮದ ಜನಪ್ರತಿನಿಧಿಗಳು, ಮುಖಂಡರು ಭಾಗವಹಿಸಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಯಕ್ಕನಹಳ್ಳಿಯ ಬಿ. ಕರಿಬಸಪ್ಪ ಕುರುಬ ಸಮಾಜದ ತಾಲ್ಲೂಕು ಕಾರ್ಯಾಧ್ಯಕ್ಷ ಬಿ. ಸಿದ್ದಪ್ಪ, ರಾಜ್ಯ ಕುರುಬ ಸಂಘದ ನಿರ್ದೇಶಕ ದ್ಯಾಮಪ್ಪ, ಮುಖಂಡರಾದ ಹೆಚ್.ಎ. ಉಮಾಪತಿ, ಮರುಳಸಿದ್ದಪ್ಪ, ಯಕ್ಕನಹಳ್ಳಿ ಗ್ರಾ.ಪಂ. ಅಧ್ಯಕ್ಷ ವೈ.ಕೆ. ದಯಾನಂದ್, ಮಾಜಿ ಅಧ್ಯಕ್ಷ ಕೆ.ವಿ. ಚಿಕ್ಕಪ್ಪ, ಮುಖಂಡರಾದ ವಿಜೇಂದ್ರಪ್ಪ, ಲಕ್ಷ್ಮಪ್ಪ, ರೇವಣಸಿದ್ದಪ್ಪ, ಹನುಮಂತಪ್ಪ, ವೆಂಕಟೇಶ್ ಸೇರಿದಂತೆ ಸಮಾಜದ ಮುಖಂಡರು ಇದ್ದರು.

# ಕುರುಬರ ವಿದ್ಯಾರ್ಧಕ ಸಂಘದ ವಾಣಿಜ್ಯ ಸಂಕೀರ್ಣ ಉದ್ಘಾಟನೆಗೆ ಸಿದ್ಧರಾಮಯ್ಯ

ದಾವಣಗೆರೆ, ಮಾ.31- ಜಿಲ್ಲಾ ಕುರುಬರ ವಿದ್ಯಾವರ್ಧಕ ಸಂಘದ ವಾಣಿಜ್ಯ ಸಂಕೀರ್ಣ ಉದ್ಘಾಟನೆ ಹಾಗೂ ಗ್ರಾ.ಪಂ. ಚುನಾವಣೆಯಲ್ಲಿ ಗೆದ್ದ ಸಮಾಜದ ಸದಸ್ಯರಿಗೆ ಸನ್ಮಾನ ಕಾರ್ಯಕ್ರಮವು ಏ.2 ರಂದು ನಡೆಯಲಿದೆ ಎಂದು ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ಕೆಂಗೋ ಹನುಮಂತಪ್ಪ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ಮಧ್ಯಾಹ್ನ 1.30ಕ್ಕೆ ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯ ವಾಣಿಜ್ಯ ಸಂಕೀರ್ಣವನ್ನು ಉದ್ಘಾಟಿಸಿ, ನಂತರ ತ್ರಿಶೂಲ್ ಕಲಾಭವನದಲ್ಲಿ ನಡೆಯುವ ವೇದಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಸೇರಿದಂತೆ ಜಿಲ್ಲೆಯ ಸಂಸದರು, ಶಾಸಕರುಗಳು ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕುರುಬ ಸಮಾಜದ 256 ಸದಸ್ಯರನ್ನು ಸನ್ಮಾನಿಸಲಾಗುವುದು ಎಂದು ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಸಮಾಜದ ಮುಖಂಡರುಗಳಾದ ದಿಳ್ಳೆಪ್ಪ, ಹೆಚ್.ಎಂ. ಮಂಜುನಾಥ್, ಬಳ್ಳಾರಿ ಷಣ್ಮುಖಪ್ಪ, ಬಿ.ಹೆಚ್. ಪರಶುರಾಮಪ್ಪ, ಬಳ್ಳಾರಿ ಜಯಣ್ಣ, ಹೆಚ್.ಬಿ. ಗೋಣೆಪ್ಪ, ನಂದೆಪ್ಪ, ಪ್ರಕಾಶ್ ಮತ್ತು ಇತರರು ಉಪಸ್ಥಿತರಿದ್ದರು.

# ರಜತ ಮಹೋತ್ಸವ ಸಂಭ್ರಮದಲ್ಲಿ 'ವಿಕಾಸ ತರಂಗಿಣಿ'

ದಾವಣಗೆರೆ ನಗರದಲ್ಲಿ ಸಾಮಾಜಿಕ ಕಾರ್ಯಗಳ ಮೂಲಕ ಜನ ಮೆಚ್ಚುಗೆ ಗಳಿಸಿದ ವಿಕಾಸ ತರಂಗಿಣಿ ರಜತ ಮಹೋತ್ಸವದ ಸಂಭ್ರಮದಲ್ಲಿದೆ.

1995ರಲ್ಲಿ ಆರಂಭವಾದ ವಿಕಾಸ ತರಂಗಿಣಿ, ಕಳೆದ 25 ವರ್ಷಗಳಿಂದ ಪ್ರತಿ ವರ್ಷ ಏಪ್ರಿಲ್ 1 ರಿಂದ ಮೇ 15ರವರೆಗೆ ಮಹಾನಗರ ಪಾಲಿಕೆ ಮುಂಭಾಗ ಉಚಿತ ಮಜ್ಜಿಗೆ ಶಿಬಿರ ಏರ್ಪಡಿಸಿ ಜನತೆಗೆ ಬಿಸಿಲಿನ ದಾಹವನ್ನು ತೀರಿಸುತ್ತಿದೆ.

ಇಂದಿಗೂ ಸಹ ನಗರದ ಜನತೆ ಬೇಸಿಗೆ ಬಂತೆಂದರೆ ವಿಕಾಸ ತರಂಗಿಣಿಯ ಉಚಿತ ಮಜ್ಜಿಗೆಯನ್ನು ನೆನಪಿಸಿಕೊಳ್ಳುತ್ತಾರೆ. ಅಷ್ಟೇ ಅಲ್ಲ, ನಗರದ ವಿವಿಧ ಸಂಘ, ಸಂಸ್ಥೆಗಳೂ ಸಹ ಮಜ್ಜಿಗೆ ವಿತರಣೆ ಮಾಡುವಂತೆ ಪ್ರೇರಣೆ ನೀಡಿದೆ ಈ ವಿಕಾಸ ತರಂಗಿಣಿ.

ಸಾಮಾಜಿಕ ಸೇವಾ ಕಾರ್ಯಗಳ ಜೊತೆಗೆ ಜನತೆಯಲ್ಲಿ ಅಧ್ಯಾತ್ಮದ ಅರಿವನ್ನೂ ಮೂಡಿಸುತ್ತಿದೆ. ಮಹಾತ್ಮರಿಂದ ಪ್ರವಚನಗಳು, ಸಂಜೆ ಸಾಮೂಹಿಕ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದೆ.

ಪ್ರತಿವರ್ಷ ಶ್ರೀ ಜೆಯ್ಯರ್‌ಸ್ವಾಮಿಗಳ ಹುಟ್ಟು ಹಬ್ಬವನ್ನು ಆಚರಿಸಿ, ದಾವಣಗೆರೆ ಉಪಕಾರಾಗೃಹದಲ್ಲಿ ಇರುವ ಖೈದಿಗಳ ಜೊತೆಯಲ್ಲಿ ದೀಪಾವಳಿ ಆಚರಿಸಿ, ಸಿಹಿ ಊಟ ಬಡಿಸಿ, ಅವರ ಪರಿವರ್ತನೆಗಾಗಿ ಪ್ರಮುಖರಿಂದ ಉಪನ್ಯಾಸಗಳನ್ನು ನಡೆಸುತ್ತಿದೆ.

ಖೈದಿಗಳಿಗೆ ಬೇಕಾಗುವ ಬಳಕೆ ಸಾಮಗ್ರಿಗಳು, ಮನೋರಂಜನೆಗಾಗಿ ಕೇರಂ ಬೋರ್ಡ್ ನೀಡಿದೆ. ಖೈದಿಗಳಲ್ಲಿನ ಪ್ರತಿಭೆ ಗುರುತಿಸಿ ಬಹುಮಾನ ನೀಡುತ್ತಿದೆ.

12 ವರ್ಷಗಳಿಗೊಮ್ಮೆ ಬರುವ ಕಾವೇರಿ ಕುಂಭಮೇಳ ಪುಷ್ಕರ ಸಂದರ್ಭದಲ್ಲಿ ಮೈಸೂರು, ಶ್ರೀರಂಗಪಟ್ಟಣದಲ್ಲಿ 12 ದಿನಗಳ ಕಾಲ ಬೇರೆ ಬೇರೆ ರಾಜ್ಯ ಮತ್ತು ದೂರ ಪ್ರಾಂತ್ಯಗಳಿಂದ ಬರುವ ಭಕ್ತಾದಿಗಳಿಗೆ ವಸತಿ ಮತ್ತು ಪ್ರಸಾದ ವ್ಯವಸ್ಥೆ ಮಾಡಿದೆ.

2020ರ ನವೆಂಬರ್‌ನಲ್ಲಿ ನಡೆದ ತುಂಗಭದ್ರಾ ಪುಷ್ಕರ ಕುಂಭಮೇಳದಲ್ಲಿ ಕೊರೊನಾ ನಿವಾರಣೆ ಮತ್ತು ಲೋಕ ಕಲ್ಯಾಣಕ್ಕಾಗಿ 12 ದಿನಗಳ ಕಾಲ ಬ್ರಹ್ಮ ಯಜ್ಞವನ್ನು ಆಚರಿಸಿ, ಅತಿಥಿಗಳಿಗೆ ವಸತಿ ಮತ್ತು ಪ್ರಸಾದ ವ್ಯವಸ್ಥೆ ಮಾಡಲಾಗಿದೆ.

ಕಳೆದ 4 ವರ್ಷಗಳ ಹಿಂದೆ ಅನಾವೃಷ್ಟಿ ಸಂಭವಿಸಿದ ಸಂದರ್ಭದಲ್ಲಿ ಮಳೆರಾಯನ ಪ್ರಾರ್ಥನೆಗಾಗಿ ವರುಣ ಯಾಗವನ್ನು ಮತ್ತು ಶ್ರೀರಾಮ ತಾರಕ ಯಜ್ಞವನ್ನು ಸಹ ದಾವಣಗೆರೆ ಆರ್.ಹೆಚ್. ಛತ್ರದಲ್ಲಿ ನೆರವೇರಿಸಲಾಗಿತ್ತು.

ಶ್ರಾವಣ ಮಾಸದಲ್ಲಿ ಆರ್.ಹೆಚ್. ಛತ್ರದಲ್ಲಿ ವರಮಹಾಲಕ್ಷ್ಮಿ ಪೂಜೆಯನ್ನು ಸಾಮೂಹಿಕವಾಗಿ ನಡೆಸಲಾಗಿತ್ತು. 'ಮರ ಬೆಳೆಸಿ, ನಾಡು ಉಳಿಸಿ' ಈ ಕಾರ್ಯಕ್ರಮದಲ್ಲಿ ಪ್ರಕೃತಿ ಪ್ರೇಮಿಗಳಿಗೆ ಸನ್ಮಾನಿಸಿ, ಆರ್ಥಿಕವಾಗಿ ಸಹಾಯ ಮಾಡಲಾಗಿತ್ತು.

65 ವರ್ಷಗಳ ಕಾಲ ದಿನಪತ್ರಿಕೆ ಮಾರುವ ಇಳಿ ವಯಸ್ಸಿನ ಕಾಯಕ ಪುರುಷರನ್ನು ಗುರುತಿಸಿ, ಸನ್ಮಾನಿಸಿ, ಆರ್ಥಿಕ ಸಹಾಯ ನೀಡಲಾಗಿತ್ತು.

ಅನಾಥ ಆಶ್ರಮಗಳಲ್ಲಿದ್ದವರಿಗೆ ಮನರಂಜನೆಗಾಗಿ ಟಿ.ವಿ. ಮತ್ತು ಆಸ್ಪತ್ರೆಯಲ್ಲಿ ಇರುವ ರೋಗಿಗಳಿಗೆ ಹಣ್ಣು ಇತ್ಯಾದಿ ವಿತರಿಸಲಾಗಿದೆ. ಹಲವೆಡೆ ಉಚಿತ ವೈದ್ಯಕೀಯ ಶಿಬಿರಗಳನ್ನು ಏರ್ಪಡಿಸಲಾಗಿದೆ.

2017 ರಲ್ಲಿ ರಾಮಾನುಜ 'ಸಹಸ್ರಾಬ್ದಿ' (1000 ವರ್ಷ) ಕಾರ್ಯಕ್ರಮವನ್ನು ತೊಗಟವೀರ ಕಲ್ಯಾಣ ಮಂಟಪದಲ್ಲಿ ನೆರವೇರಿಸಲಾಗಿತ್ತು. ಹೀಗೆ ಅನೇಕ ಬಗೆಯ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ವಿಕಾಸ ತರಂಗಿಣಿಗೆ ನಗರದ ಅನೇಕ ದಾನಿಗಳು ಸಹಾಯ ಹಸ್ತ ಚಾಚಿದ್ದಾರೆ. 25ರ ಹರೆಯದ ಈ ಸಂಸ್ಥೆ ಮತ್ತಷ್ಟು ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡು ಇತರರಿಗೆ ಮಾದರಿಯಾಗಲಿ.

## ಮಜ್ಜಿಗೆ ವಿತರಣೆ ಕಾರ್ಯಕ್ರಮಕ್ಕೆ ಇಂದು ಚಾಲನೆ

**ದಾವಣಗೆರೆ ಮಹಾನಗರ ಪಾಲಿಕೆ ಮುಂಭಾಗದಲ್ಲಿ ಇಂದು ಬೆಳಿಗ್ಗೆ 11.30ಕ್ಕೆ ವಿಕಾಸ ತರಂಗಿಣಿ ರಜತ ಮಹೋತ್ಸವ ಕಾರ್ಯಕ್ರಮ ಹಾಗೂ ಈ ವರ್ಷದ ಮಜ್ಜಿಗೆ ವಿತರಣೆ ಕಾರ್ಯಕ್ರಮಕ್ಕೆ 'ಜನತಾವಾಣಿ' ಸಂಪಾದಕ ಎಂ.ಎಸ್. ವಿಕಾಸ್ ಅವರು ಚಾಲನೆ ನೀಡಲಿದ್ದಾರೆ. ಮಹಾನಗರ ಪಾಲಿಕೆಯ ಮೇಯರ್ ಎಸ್.ಟಿ. ವೀರೇಶ್, ಆಯುಕ್ತ ವಿಶ್ವನಾಥ ಮುದಜ್ಜಿ, ಸದಸ್ಯ ಬಿ.ಜಿ. ಅಜಯ್ ಕುಮಾರ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಇಸ್ಕಾನ್ ಅವಧೂತ ಚಂದ್ರ ಪ್ರಭುಗಳಿಂದ ಆಶೀರ್ವಚನ ನಡೆಯಲಿದೆ.**

## ಮಜ್ಜಿಗೆ ಎಂಬ ಅಮೃತ

ಮಜ್ಜಿಗೆಗೆ ಸಂಸ್ಕೃತದಲ್ಲಿ ತರ್ಕಮ್, ಮಾಧಿತಂ ಹಾಗೂ ಉದಾಶ್ವಿಟ್ಟು ಎಂಬ ಮೂರು ಹೆಸರುಗಳಿವೆ.

**ತರ್ಕಮ್** : ಮೊಸರಿಗೆ ಕಾಲು ಭಾಗ ಮಾತ್ರ ನೀರು ಬೆರೆಸಿ ಉಪಯೋಗಿಸಬಹುದಾದುದು.

**ಮಾಧಿತಂ:** ಸ್ವಲ್ಪಮಟ್ಟಕ್ಕೆ ನೀರು ಬೆರೆಸಿ ಉಪಯೋಗಿಸಿದರೆ ಇದು ಮಾದಿತಂ ಎಂದು ಕರೆಯುತ್ತಾರೆ. ಇದು ಆರೋಗ್ಯಕ್ಕೆ ಅಷ್ಟು ಒಳ್ಳೆಯದಲ್ಲ.

**ಉದಾಶ್ವಿಟ್ಟು:** ಹೆಚ್ಚಿನ ನೀರನ್ನು ಸ್ವಲ್ಪ ಉಪ್ಪಿನೊಂದಿಗೆ ಬೆರೆಸಿ ಉಪಯೋಗಿಸುವುದು ಉದಾಶ್ವಿಟ್ಟು. ಇದು ಆರೋಗ್ಯಕ್ಕೆ ಉತ್ತಮವಾದುದು. ಇದರಿಂದ ಯಾವುದೇ ಕಾಯಿಲೆ ಬರುವುದಿಲ್ಲ. ದೇಹದ ದುರ್ಬಲತೆಗಳು, ಚರ್ಮರೋಗಗಳು, ದೀರ್ಘಕಾಲದ ಕಾಯಿಲೆಗಳು, ಕೊಬ್ಬು ಕಡಿಮೆ ಮಾಡುತ್ತದೆ. ಈ ಮಜ್ಜಿಗೆ ಸೇವನೆಯಿಂದ ದೇಹವು ಉತ್ತಮ ಹಿಡಿತ ಹೊಂದಿರುತ್ತದೆ. ಮೊಸರಿಗಿಂತ ಮಜ್ಜಿಗೆ ಉತ್ತಮ. ಆದ್ದರಿಂದ ಬೇಸಿಗೆಯಲ್ಲಿ ನಾವು ಹೆಚ್ಚು ಮಜ್ಜಿಗೆ ಸೇವಿಸಬೇಕು. ಫ್ರಿಡ್ಜ್‌ನಲ್ಲಿಟ್ಟ ಮಜ್ಜಿಗೆ ಸೇವನೆ ಒಳಿತಲ್ಲ. ಹೆಚ್ಚು ವಯಸ್ಸಾದವರು ಹೆಚ್ಚು ಮಜ್ಜಿಗೆ ಕುಡಿದರೆ ಒಳ್ಳೆಯದು. ಬೇಸಿಗೆ ಅಷ್ಟೇ ಅಲ್ಲದೆ ಎಲ್ಲಾ ಋತುಗಳಲ್ಲೂ ಉಪಯೋಗಿಸಬಹುದಾದ ಅಮೃತ ಮಜ್ಜಿಗೆ.

ನಗರದಲ್ಲಿ ಮಾರ್ಚ್ 28 ರಿಂದ ಜೂನ್ 30ರ ವರೆಗೆ ಲಾಕ್‌ಡೌನ್ ಸಂದರ್ಭದಲ್ಲಿ ನಿತ್ಯ ಎರಡು ಸಾವಿರ ಜನರಿಗೆ ಅನ್ನ ಪ್ರಸಾದವನ್ನೂ, ಮಹಾನಗರ ಪಾಲಿಕೆಯ ಪೌರ ಕಾರ್ಮಿಕರಿಗೆ, ಭಿಕ್ಷುಕರಿಗೆ, ಬಡವರು ಮತ್ತು ಆಸ್ಪತ್ರೆಯಲ್ಲಿರುವ ಜನರಿಗೆ ನಿತ್ಯ ಪ್ರಸಾದ ವ್ಯವಸ್ಥೆ ಮಾಡಿರುವುದು ವಿಕಾಸ ತರಂಗಿಣಿ ಮಾಡಿದ ಹೆಮ್ಮೆಯ ಕಾರ್ಯ.

ಈ ಸಂಕಷ್ಟ ಸಮಯದಲ್ಲಿ ದಾವಣಗೆರೆಯ ಮಹಾಜನತೆ ಸ್ಪಂದಿಸಿ ಹೆಚ್ಚಿನ ದಾನ ನೀಡಿದ್ದಾರೆ. ಕೊರೊನಾ ಲೆಕ್ಕಿಸದೆ ವಾರಿಯರ್ಸ್‌ಗಳಾಗಿ ಸೇವೆ ಸಲ್ಲಿಸಿದ್ದನ್ನು ನೆನಪಿಸಿಕೊಂಡ ವಿಕಾಸ ತರಂಗಿಣಿಯ ಸತ್ಯನಾರಾಯಣ ಅವರು, ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುವುದಾಗಿ ಹೇಳಿದರು.

# ಸಿ.ಡಿ. : ತನಿಖಾಧಿಕಾರಿಗಳಿಂದ ಸೋರಿಕೆ

**(1ನೇ ಪುಟದಿಂದ)** ಹೇಳಿದ್ದಾರೆ.

ಬೆಂಗಳೂರು ಪೊಲೀಸ್ ಕಮೀಷನರ್ ಹಾಗೂ ಎಸ್‌ಐಟಿ ಅಧಿಕಾರಿಗಳ ವಿರುದ್ಧ ಪ್ರತ್ಯೇಕ ಎಫ್‌ಐಆರ್ ದಾಖಲಿಸಲು ಅನುಮತಿ ನೀಡುವಂತೆ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸುವುದಾಗಿ ತಿಳಿಸಿದ್ದಾರೆ.

ಅಷ್ಟೇ ಅಲ್ಲ ಕೆಲವು ಪೊಲೀಸ್ ಅಧಿಕಾರಿಗಳು ಹಾಗೂ ಕಂದಾಯ ಸಚಿವ ಆರ್. ಅಶೋಕ್ ಸೇರಿದಂತೆ ಕೆಲವು ಬಿಜೆಪಿ ನಾಯಕರ ವಿರುದ್ಧ ಹರಿಹಾಯ್ದಿದ್ದಾರೆ.

ನನ್ನ ಮೇಲಿನ ಹಿಂದಿನ ಪ್ರಕರಣಗಳನ್ನು ಎಸ್‌ಐಟಿ ಕೆದಕುತ್ತಿದೆ. ನನ್ನನ್ನು ಏಕೆ ರೌಡಿಶೀಟರ್ ಮಾಡಿಲ್ಲ ಎಂದು ಎಸ್‌ಐಟಿ ಅಧಿಕಾರಿಗಳು ಇನ್ಸ್‌ಪೆಕ್ಟರ್ ಒಬ್ಬರನ್ನು ತಮ್ಮ ಕಚೇರಿಗೆ ಕರೆಸಿ ಕೇಳಿದ್ದಾರೆ ಎಂದೂ ಜಗದೀಶ್ ಆರೋಪಿಸಿದ್ದಾರೆ.

ಬಿಜೆಪಿ ಪರ ಇರುವ ಪೊಲೀಸ್ ಇನ್ಸ್‌ಪೆಕ್ಟರ್‌ಗಳು ನನ್ನ ವಿರುದ್ಧವೇ ಮಸಲತ್ತು ನಡೆಸಿದ್ದಾರೆ. ಸಿ.ಡಿ. ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧ ದಾಳಿ ಪ್ರಾರಂಭವಾಗಿದೆ.

ಜಗದೀಶ್ ಕುಮಾರ್ ಒಬ್ಬ ರೌಡಿಶೀಟರ್. ಅವರ ಜೀವನವೇ ಸರಿಯಿಲ್ಲ ಎಂದು ಭ್ರಷ್ಟ ಪೊಲೀಸ್ ಹಾಗೂ ರಾಜಕಾರಣಿಗಳು ಆರೋಪ ಮಾಡುತ್ತಿದ್ದಾರೆ.

11 ವರ್ಷಗಳ ಹಿಂದೆ ನಾನು ಒಬ್ಬ ಹೋರಾಟಗಾರನಾಗಿದ್ದೆ. ಬಡ ಬಗ್ಗರ ಜಮೀನನ್ನು ನಗರದ ಹೊರ ವಲಯದಲ್ಲಿ ಸಚಿವ ಆರ್. ಅಶೋಕ್ ಸಂಬಂಧಿಗಳು ಖರೀದಿ ಮಾಡಿದ್ದರು. ಈ ಬಗ್ಗೆ ನಾನು ಅವರ ವಿರುದ್ಧ ಲೋಕಾಯುಕ್ತಕ್ಕೆ ದೂರು ನೀಡಿದ್ದೆ.

ಇದಕ್ಕೆ ಪ್ರತೀಕಾರವಾಗಿ ಹಿರಿಯ ಪೊಲೀಸ್ ಅಧಿಕಾರಿಗಳು ನನ್ನ ವಿರುದ್ಧ ಮೊಕದ್ದಮೆಗಳನ್ನು ದಾಖಲಿಸಿದ್ದರು.

ನಾನು ಎಲ್‌ಎಲ್‌ಬಿ ಓದುವಾಗಲೇ ಪ್ರಕರಣಗಳನ್ನು ಖುಲಾಸೆ ಮಾಡಿಕೊಂಡೆ. ನನ್ನ ವಿರುದ್ಧ ಎರಡು, ಮೂರು ದಿನಗಳಲ್ಲಿ ರೌಡಿಶೀಟರ್ ಓಪನ್ ಮಾಡಿಸಿದ ಪೊಲೀಸ್ ಅಧಿಕಾರಿ, ಇಂದು ನನ್ನನ್ನು ರೌಡಿ ಶೀಟರ್ ಎನ್ನುತ್ತಿದ್ದಾನೆ.

ಇದಕ್ಕೆ ನಾನು ಜಗ್ಗುವುದಿಲ್ಲ. ಸಂತ್ರಸ್ತೆಯನ್ನು ನನ್ನ ಸಹೋದರಿ ಎಂದು ತಿಳಿದು, ಆಕೆ ಪರ ಹೋರಾಟ ಮಾಡುತ್ತೇನೆ ಎಂದು ಹೇಳಿದ್ದಾರೆ.

## ಕೊಮಾರನಹಳ್ಳಿಯಲ್ಲಿ ಕ್ರಿಕೆಟ್ ಟೂರ್ನಿ



### ಹೀರೋ ಇಲೆವನ್ ತಂಡಕ್ಕೆ ಪ್ರಥಮ ಸ್ಥಾನ

ಮಲೇಬೆನ್ನೂರು, ಮಾ.31- ಕೊಮಾರನಹಳ್ಳಿ ಗ್ರಾಮದಲ್ಲಿ ಫ್ರೆಂಡ್ಸ್ ಕ್ರಿಕೆಟರ್ಸ್ ವತಿಯಿಂದ ಮೊದಲ ಬಾರಿಗೆ ಹಮ್ಮಿಕೊಂಡಿದ್ದ ಟೆನ್ನಿಸ್ ಕ್ರಿಕೆಟ್ ಟೂರ್ನಿಯಲ್ಲಿ ಪ್ರಥಮ ಬಹುಮಾನಕ್ಕೆ ಆಯ್ಕೆಯಾದ ದಾವಣಗೆರೆ ಹೀರೋ ಇಲೆವನ್ ತಂಡಕ್ಕೆ ಶಾಸಕ ಬಿ.ಪಿ. ಹರೀಶ್ 35 ಸಾವಿರ ರೂ. ನಗದು ಹಾಗೂ ಆಕರ್ಷಕ ಟ್ರೋಫಿ ನೀಡಿ ಅಭಿನಂದಿಸಿದರು.

ದ್ವಿತೀಯ ಸ್ಥಾನ ಪಡೆದ ಕೊಮಾರನಹಳ್ಳಿಯ ಫ್ರೆಂಡ್ಸ್ ಕ್ರಿಕೆಟರ್ಸ್ ತಂಡಕ್ಕೆ 25 ಸಾವಿರ ರೂ. ನಗದು ಹಾಗೂ ಟ್ರೋಫಿಯನ್ನು ನೀಡಲಾಯಿತು. ಜಿ.ಪಂ. ಸದಸ್ಯ ಬಿ.ಎಂ. ವಾಗೀಶ್ ಸ್ವಾಮಿ, ತಾಲ್ಲೂಕು ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟೆ ಲಿಂಗರಾಜ್, ದಿಶಾ ಸಮಿತಿ ಸದಸ್ಯ ಐರಣಿ ಅಣ್ಣಪ್ಪ, ಸಮಾಜ ಸೇವಕ ನಂದಿಗಾವಿ ಶ್ರೀನಿವಾಸ್, ಗ್ರಾ.ಪಂ. ಅಧ್ಯಕ್ಷ ಐ.ಪಿ. ರಂಗನಾಥ್, ಜಿಲ್ಲಾ ಬಿಜೆಪಿ ಕಾರ್ಯದರ್ಶಿ ಐರಣಿ ಮಹೇಶ್ವರಪ್ಪ, ಗ್ರಾ.ಪಂ. ಸದಸ್ಯರಾದ ನೇತ್ರಾವತಿ ಹನುಮಂತಪ್ಪ ಉಪಸ್ಥಿತರಿದ್ದರು.

ರಾಮಣ್ಣ ಸ್ವಾಮಿ, ಜಿ. ರಂಗಪ್ಪ, ಎಸ್. ರಂಗಪ್ಪ, ಯು. ನಾಗಪ್ಪ, ಆರೋಗ್ಯ ರಕ್ಷಾ ಸಮಿತಿ ಸದಸ್ಯ ಐರಣಿ ಮೂರ್ತಿ, ಬಿ. ಮಂಜುನಾಥ್, ಪುರಸಭೆಯ ನಾಮಿನಿ ಸದಸ್ಯರಾದ ಪಿ.ಆರ್. ರಾಜು, ಎ.ಕೆ. ಲೋಕೇಶ್, ಮೈದಾನದ ದಾನಿಗಳಾದ ಜಿ. ಮಹೇಶ್ವರಪ್ಪ, ಕೆ.ಎಂ. ಕುಮಾರಸ್ವಾಮಿ, ಕ್ರೀಡಾ ಆಯೋಜಕರಾದ ದುಂಡಪ್ಪ, ಪ್ರವೀಣ್, ಸುನೀಲ್, ಚಿದಂಬರ್, ಹಾಲೇಶ್, ರಂಗನಾಥ್, ಕೃಷ್ಣ, ಚೇತನ್ ಇನ್ನಿತರರಿದ್ದರು.

## ರಾಜ್ಯ - ರಾಷ್ಟ್ರೀಯ ವಾರ್ತೆ

### ಎಸ್‌ಐಟಿ ತನಿಖೆ ಕ್ರಮಬದ್ಧವಾಗಿದೆ

ಬೆಂಗಳೂರು, ಮಾ. 31 - ರಮೇಶ್ ಜಾರಕಿಹೊಳಿ ಸಿ.ಡಿ. ಪ್ರಕರಣದಲ್ಲಿ ತಮ್ಮ ಸರ್ಕಾರವನ್ನು ಟೀಕಿಸುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಯಾವ ನೈತಿಕತೆ ಇದೆ? ಎಂದು ಪ್ರಶ್ನಿಸಿರುವ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಬಸವರಾಜ್ ಬೊಮ್ಮಾಯಿ, ಅನವಶ್ಯಕವಾಗಿ ಮಾತನಾಡಿ ಪ್ರಕರಣದ ತನಿಖೆಯ ಗಾಂಭೀರ್ಯತೆಯನ್ನು ಹಾಳು ಮಾಡಬೇಡಿ ಎಂದು ಹೇಳಿದರು.

ಬುಧವಾರ ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಸ್‌ಐಟಿ ತನಿಖೆ ಕ್ರಮಬದ್ಧವಾಗಿ, ಕಾನೂನು ಪ್ರಕಾರ ನ್ಯಾಯಸಮ್ಮತವಾಗಿ ನಡೆಯುತ್ತಿದೆ. ಇಂಥ ಸಂದರ್ಭದಲ್ಲಿ ಪ್ರತಿಭಟನೆ, ಸಾಮಾಜಿಕ ಜಾಲತಾಣಗಳ ಮೂಲಕ ಇಲ್ಲ ಸಲ್ಲದ ಹೇಳಿಕೆಗಳನ್ನು ನೀಡಬೇಡಿ. ಅನಾವಶ್ಯಕವಾಗಿ ಮಾತನಾಡಿ ಪ್ರಕರಣದ ಗಾಂಭೀರ್ಯತೆಯನ್ನು ಹಾಳು ಮಾಡಬೇಡಿ. ತನಿಖೆಯ ಪ್ರಗತಿಗೆ ಅಡ್ಡಿಪಡಿಸಬೇಡಿ ಎಂದು ಪ್ರತಿ ಪಕ್ಷಗಳಿಗೆ ವಿನಂತಿ ಮಾಡಿದರು.

### ಬಿಜೆಪಿಯಿಂದ ಲಂಚದ ಆರೋಪ

#### ಜಮೀರ್ ವಿರುದ್ಧ ಕುಮಾರಸ್ವಾಮಿ ವಾಗ್ದಾಳಿ

ಬೆಂಗಳೂರು, ಮಾ. 31 - ಬಸವಕಲ್ಯಾಣ ವಿಧಾನಸಭಾ ಉಪ ಚುನಾವಣೆಯಲ್ಲಿ ಬಿಜೆಪಿಯಿಂದ ಲಂಚ ಪಡೆದು, ಜೆಡಿಎಸ್ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದಾರೆ ಎಂಬ ಕಾಂಗ್ರೆಸ್ ಶಾಸಕರೊಬ್ಬರ ಆರೋಪಕ್ಕೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ತಿರುಗೇಟು ನೀಡಿದ್ದಾರೆ.

ಕಾಂಗ್ರೆಸ್ ಶಾಸಕ ಜಮೀರ್ ಅಹಮದ್‌ಖಾನ್ ಅವರ ಹೆಸರು ಉಲ್ಲೇಖ ಮಾಡದೇ, ಕುಮಾರಸ್ವಾಮಿ ವಾಗ್ದಾಳಿ ಮಾಡಿದ್ದಾರೆ. ಈ ಕುರಿತು ಸರಣಿ ಟ್ವೀಟ್ ಮಾಡಿರುವ ಅವರು, 2005ರಲ್ಲಿ ಎಸ್.ಎಂ.ಕೃಷ್ಣ ಅವರಿಂದ ತೆರವಾಗಿದ್ದ ಚಾಮರಾಜಪೇಟೆ ಉಪಚುನಾವಣೆಗೆ ಜೆಡಿಎಸ್ ಮುಸ್ಲಿಂ ಅಭ್ಯರ್ಥಿಯನ್ನು ಆಯ್ಕೆ ಮಾಡಿತ್ತು. ಅವರ ಖರ್ಚು-ವೆಚ್ಚಗಳಿಗೆ ಜೆಡಿಎಸ್ ಬಿಜೆಪಿಯಿಂದ ದುಡ್ಡು ತಂದಿತ್ತೇ? ಎಂದು ವ್ಯಂಗ್ಯವಾಡಿದ್ದಾರೆ.

### ಬೆಳೆ ವಿಮೆ ಯೋಜನೆಯಿಂದ ವಿಮಾ ಕಂಪನಿಗಳನ್ನು ಸಾಕುತ್ತಿದ್ದೇವೆ

ಬೆಂಗಳೂರು, ಮಾ. 31 - ರೈತರ ಅನುಕೂಲಕ್ಕಾಗಿ ಬೆಳೆ ವಿಮೆ ಯೋಜನೆ ಇದೆ. ಆದರೆ ವಿಮಾ ಕಂಪನಿಗಳನ್ನು ನಾವು ಸಾಕುತ್ತಿದ್ದೇವೆ. ಸರಿಯಾದ ಅನುಷ್ಠಾನ ಇಲ್ಲದಿರುವುದಕ್ಕೆ ರೈತರಿಗೆ ಸಮರ್ಪಕ ವಿಮೆ ದೊರೆಯುತ್ತಿಲ್ಲ ಎಂದು ಸಾಂಖ್ಯಿಕ ಸಚಿವ ನಾರಾಣಯಗೌಡ ವಿಷಾದಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, ವಿಮೆ ಹಣ ಕಟ್ಟಿರುವುದರಲ್ಲಿ ಶೇ. 50 ರಷ್ಟು ಹಣ ಸಹ ರೈತರಿಗೆ ಸಿಗುತ್ತಿಲ್ಲ. ಬೆಳೆ ಕಟಾವು ಮಾಡಿ ತೂಕಕ್ಕೆ ಹಾಕುವಲ್ಲಿ ಮೋಸ ನಡೆಯುತ್ತಿದೆ. ಸರ್ವೆ ನಂಬರ್‌ನ ಸ್ಥಳದಲ್ಲೇ ಹೋಗಿ ಪರಿಶೀಲನೆ ಆಗಬೇಕು. ಅಧಿಕಾರಿಗಳ ಒಂದು ಸಣ್ಣ ತಪ್ಪಿನಿಂದ ರೈತರಿಗೆ ದೊಡ್ಡ ನಷ್ಟವಾಗುತ್ತದೆ. ಈ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದರು. ರೈತರಿಗೆ ಬೆಳೆ ವಿಮೆ ಪರಿಹಾರ ದೊರೆಯುವಲ್ಲಿ ಅನ್ಯಾಯವಾಗುತ್ತಿದೆ. ಬೆಳೆ ನಷ್ಟ ಆಗಿದ್ದರೂ ಸರಿಯಾದ ಪರಿಶೀಲನೆ ನಡೆಸದೆ ವರದಿ ನೀಡುವ ಕಾರಣ ರೈತರಿಗೆ ವಿಮಾ ಹಣ ಸಿಗುತ್ತಿಲ್ಲ. ತಕ್ಷಣ ಅಧಿಕಾರಿಗಳು ರೈತರ ಜೊತೆ ಸಭೆ ನಡೆಸಿ ಇನ್ನಷ್ಟು ಮಾಹಿತಿ ಪಡೆದುಕೊಳ್ಳಬೇಕು. ಬಳಿಕ ಅಧಿಕಾರಿಗಳ ಜೊತೆ ಬೆಳೆ ವಿಮೆ ವಿಚಾರವಾಗಿಯೇ ಸಭೆ ನಡೆಸುವುದಾಗಿ ತಿಳಿಸಿದರು.

### ಸಿ.ಡಿ. ಯುವತಿಯ ವೈದ್ಯಕೀಯ ಪರೀಕ್ಷೆ

ಬೆಂಗಳೂರು, ಮಾ. 31 - ಸಿ.ಡಿ. ಪ್ರಕರಣದ ಯುವತಿಯ ವೈದ್ಯಕೀಯ ಪರೀಕ್ಷೆಯನ್ನು ಬೋರಿಂಗ್ ಆಸ್ಪತ್ರೆಯಲ್ಲಿ ನಡೆಸಲಾಯಿತು.

ಮಹಿಳಾ ತಜ್ಞ ವೈದ್ಯರು ಸಂತ್ರಸ್ತೆ ಯುವತಿಯನ್ನು ವೈದ್ಯಕೀಯ ತಪಾಸಣೆ ಮಾಡಿದ್ದಲ್ಲದೆ, ಆಕೆ ಹೊರ ರಾಜ್ಯದಿಂದ ಬಂದವರಾಗಿದ್ದರಿಂದ ಕೊರೊನಾ ಪರೀಕ್ಷೆಗೂ ಒಳಪಡಿಸಲಾಗಿದೆ. ಎಸ್‌ಐಟಿಯ ತನಿಖಾ ಅಧಿಕಾರಿ ಎಂ.ಸಿ. ಕವಿತಾ ಅವರು ಸಂತ್ರಸ್ತೆಯ ಸಂಪೂರ್ಣ ಹೊಣೆಗಾರಿಕೆಯನ್ನು ವಹಿಸಿಕೊಂಡು, ಆಕೆಯನ್ನು ಪರೀಕ್ಷೆಗೆ ಒಳಪಡಿಸಿದ್ದಲ್ಲದೆ, ನಂತರ ಎಸ್.ಐ.ಟಿ. ಮುಂದೆ ವಿಚಾರಣೆಗೆ ಒಳಪಡಿಸಲಾಗಿದೆ ಎನ್ನಲಾಗಿದೆ.

### ಕೊವ್ಯಾಕ್ಸಿನ್ ಆಮದಿಗೆ ಬ್ರೆಜಿಲ್ ತಡೆ

ಹೈದರಾಬಾದ್, ಮಾ. 31 - ಬ್ರೆಜಿಲ್‌ನ ಆರೋಗ್ಯ ನಿಯಂತ್ರಕ ಅನ್ವಿಸಾ ಭಾರತ್ ಬಯೋಟೆಕ್‌ನ ಕೊರೊನಾ ಲಸಿಕೆಯಾದ ಕೊವ್ಯಾಕ್ಸಿನ್ ಆಮದಿಗೆ ಅನುಮತಿ ನಿರಾಕರಿಸಿದೆ. ಲಸಿಕೆ ಉತ್ಪಾದನಾ ಘಟಕ ಪ್ರಸಕ್ತ ಇರುವ ಉತ್ತಮ ಉತ್ಪಾದನಾ ಪದ್ಧತಿಗಳಿಗೆ (ಸಿ.ಜಿ.ಎಂ.ಪಿ.)ಗೆ ಅನುಗುಣವಾಗಿಲ್ಲ ಎಂದು ಈ ಕ್ರಮ ತೆಗೆದುಕೊಳ್ಳಲಾಗಿದೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಭಾರತ್ ಬಯೋಟೆಕ್, ಬ್ರೆಜಿಲ್ ಸರ್ಕಾರ ತನ್ನಿಂದ 2 ಕೋಟಿ ಲಸಿಕೆಗಳನ್ನು ಪಡೆಯಲು ಮಾಡಿಕೊಂಡಿರುವ ಒಪ್ಪಂದ ಇನ್ನೂ ಅಂತ್ಯವಾಗಿಲ್ಲ.

ವಿಷಯಗಳನ್ನು ಬಗೆಹರಿಸಿಕೊಳ್ಳಲಾಗುತ್ತಿದೆ ಎಂದು ತಿಳಿಸಿದೆ. ಕೆಲ ಪ್ರಮುಖ ದಾಖಲೆಗಳು ಲಭ್ಯವಾಗದ ಕಾರಣ ಲಸಿಕೆ ಆಮದು ತಡೆದಿರುವುದಾಗಿ ಬ್ರೆಜಿಲ್ ಆರೋಗ್ಯ ನಿಯಂತ್ರಕ ಸಂಸ್ಥೆಯಾದ ಅನ್ವಿಸಾ ತಿಳಿಸಿದೆ.

### ಕೋವಿಶೀಲ್ಡ್ ಸಂಗ್ರಹಣ ಅವಧಿ 9 ತಿಂಗಳಿಗೆ ಹೆಚ್ಚಳ

ನವದೆಹಲಿ, ಮಾ. 31 - ಆಕ್ಸ್‌ಫರ್ಡ್ ಅಸ್ಟ್ರಾಜೆನೆಕಾ ರೂಪಿಸಿದ ಕೋವಿಶೀಲ್ಡ್ ಕೊರೊನಾ ಲಸಿಕೆಯ ಸಂಗ್ರಹಣ ಅವಧಿಯನ್ನು ಔಷಧ ನಿಯಂತ್ರಣ ಡಿ.ಸಿ.ಜಿ.ಐ. ಆರು ತಿಂಗಳಿನಿಂದ ಒಂಭತ್ತು ತಿಂಗಳಿಗೆ ವಿಸ್ತರಿಸಿದೆ. ಸೆರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾಗೆ ಪತ್ರ ಬರೆದಿರುವ ಔಷಧ ನಿಯಂತ್ರಕರ ಪ್ರಧಾನ ನಿರ್ದೇಶಕ ವಿ.ಜಿ. ಸೋಮನಿ, ಲಸಿಕೆ ಸಂಗ್ರಹಣ ಅವಧಿಯನ್ನು 9 ತಿಂಗಳಿಗೆ ವಿಸ್ತರಿಸಿರುವುದಾಗಿ ಹೇಳಿದ್ದಾರೆ.

### ಒಂದೇ ದಿನ 53,480 ಸೋಂಕು ಪತ್ತೆ

ನವದೆಹಲಿ, ಮಾ. 31 - ಬುಧವಾರದಂದು ದೇಶದಲ್ಲಿ ಒಂದೇ ದಿನ 53,480 ಕೊರೊನಾ ಪ್ರಕರಣಗಳು ಪತ್ತೆಯಾಗಿವೆ. ಇದೇ ದಿನ 354 ಸಾವುಗಳು ಸಂಭವಿಸಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಇದರಿಂದಾಗಿ ಸಕ್ರಿಯ ಸೋಂಕುಗಳ ಸಂಖ್ಯೆ 5.52 ಲಕ್ಷಕ್ಕೆ ತಲುಪಿದೆ.

### ಚುನಾವಣೆ : ಫೇಸ್‌ಬುಕ್‌ನಿಂದ ದ್ವೇಷ ತಡೆ ಕ್ರಮ

ನವದೆಹಲಿ, ಮಾ. 31- ದ್ವೇಷ ಹರಡುವುದೂ ಸೇರಿದಂತೆ ಹಲವಾರು ವಿಷಯಗಳ ಮೇಲೆ ಕಡಿವಾಣ ಹಾಕಲು ಫೇಸ್‌ಬುಕ್ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ವಿಧಾನಸಭಾ ಚುನಾವಣೆಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ. ಕಂಪನಿಯ ನೀತಿಗಳನ್ನು ಇತ್ತೀಚೆಗೆ ಹಾಗೂ ಪದೇ ಪದೇ ಉಲ್ಲಂಘಿಸಿದ ಖಾತೆಗಳಿಂದ ಮಾಹಿತಿ ಹರಡುವುದನ್ನು ತಾತ್ಕಾಲಿಕವಾಗಿ ಕಡಿಮೆ ಮಾಡಲು ಫೇಸ್‌ಬುಕ್ ನಿರ್ಧರಿಸಿದೆ.

### ಆಹಾರ ಸಂಸ್ಕರಣೆಗೆ 10,900 ಕೋಟಿ ರೂ.ಗಳ ಉತ್ಪಾದನಾ ಉತ್ತೇಜನ

ನವದೆಹಲಿ, ಮಾ. 31 - ಆಹಾರ ಸಂಸ್ಕರಣಾ ವಲಯಕ್ಕೆ 10,900 ಕೋಟಿ ರೂ.ಗಳ ಉತ್ಪಾದನಾ ಆಧರಿತ ಉತ್ತೇಜಕ (ಪಿ.ಎಲ್.ಐ.) ನೀಡಲು ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಸರ್ಕಾರದ ಯೋಜನೆಯಿಂದ 2.5 ಲಕ್ಷ ಉದ್ಯೋಗ ಸೃಷ್ಟಿಯಾಗಲಿದೆ, ರಫ್ತಿಗೆ ಉತ್ತೇಜನ ಸಿಗಲಿದೆ ಹಾಗೂ ಗ್ರಾಹಕರಿಗೆ ಹೆಚ್ಚಿನ ಮೌಲ್ಯವರ್ಧಿತ ವಸ್ತುಗಳು ದೊರೆಯಲಿವೆ ಎಂದು ಸರ್ಕಾರ ನಿರೀಕ್ಷಿಸಿದೆ.


ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
25ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಏಪ್ರಿಲ್ 1 ರಿಂದ ಮೇ 15ರವರೆಗೆ.
ಸ್ಥಳ : ಮಹಾನಗರ ಪಾಲಿಕೆ ಆವರಣ
ಇಂದಿನ ಮಜ್ಜಿಗೆ ಪ್ರಾಯೋಜಕರು :
ಬೆಳಗಾವಿ ಬಸವರಾಜಪ್ಪ, ಚಾರ್ಟರ್ಡ್ ಅಕೌಂಟೆಂಟ್ ಮತ್ತು ಕುಟುಂಬ ವರ್ಗದವರು.

ಬಿಲ್ಡಿಂಗ್ ಬಾಡಿಗೆಗಿದೆ
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

ಕರ್ನಾಟಕ ಗೃಹಮಂಡಳಿಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ
30x40 East, 30x40 West, 30x50 West, 40x60 South, 40x60 North, 30x40 South
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110, 93410 14130

ಮನೆ ಮಾರಾಟಕ್ಕಿದೆ (ಸ್ವಂತಕ್ಕೆ ಕಟ್ಟಿದ್ದು)
30x40 ದಕ್ಷಿಣ ಆಂಜನೇಯ ಬಡಾವಣೆ.
40x60 ದಕ್ಷಿಣ ಎಂ.ಸಿ.ಸಿ. 'ಬಿ' ಬ್ಲಾಕ್.
15x40 ದಕ್ಷಿಣ ಆಂಜನೇಯ ಬಡಾವಣೆ.
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315-63409

ಸೈಟುಗಳು ಮಾರಾಟಕ್ಕಿವೆ
ಶಿವ ಪಾರ್ವತಿ ಬಡಾವಣೆಯಲ್ಲಿ 30x48 ಪೂರ್ವ, ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 40x60 ಉತ್ತರ, 30x50 ಉತ್ತರ, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30x40 ಉತ್ತರ ಡಾಲರ್ಸ್ ಕಾಲೋನಿಯಲ್ಲಿ 30x50 ಪೂರ್ವ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

Wanted Teachers
Qualification: BA / BSc/ B.Ed/ D.Ed -4 Posts
Contact immediately with originals
99801 48289, 98807 43838

ಸೈಟ್‌ಗಳು ಮಾರಾಟಕ್ಕಿವೆ
ಮಹಾಲಕ್ಷ್ಮಿ ಲೇಔಟ್‌ನಲ್ಲಿ ಬಂಟರ ಕಲ್ಯಾಣ ಮಂಟಪ ಸುತ್ತ-ಮುತ್ತ 45x58 South, 45x50 North, 30x40 East, 30x50 East, 40x60 Corner
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

ಮನೆಗಳು ಮಾರಾಟಕ್ಕಿವೆ
ಶಿವ ಪಾರ್ವತಿ ಬಡಾವಣೆ 30x60 ಉತ್ತರ (2 ಮಳಿಗೆ, ಕೆಳಗೆ 2 ಮನೆ, ಮೇಲೆ 1 ಮನೆ), ಡಿ.ಸಿ.ಎಂ. ಲೇಔಟ್ ಉತ್ತರ 30x40 ಡುಪ್ಲೆಕ್ಸ್, ಎಸ್.ಎಸ್. ಹೈಟೆಕ್ 30x50 ಪಶ್ಚಿಮ, ಬಾಲಾಜಿ ಲೇಔಟ್ ಪೂರ್ವ 30x50, ಆಂಜನೇಯ ಬಡಾವಣೆ ಉತ್ತರ 35x45 ಕೆಳಗೆ ಮನೆ, ಮೇಲೆ 10 ರೂಂಗಳು
ಮನೆ ಕೊಡುವುದಕ್ಕೆ ಹಾಗೂ ತೆಗೆದುಕೊಳ್ಳುವುದಕ್ಕೆ ವಿಚಾರಿಸಿ
ಐಗೂರು ವಿಜಯ್‌ಕುಮಾರ್ 99457 02495
ಸುರೇಶ್ 95911 60520

ಹಾಲ್ ಬಾಡಿಗೆಗೆ ಇದೆ
ಬ್ಯೂಟಿ ಪಾರ್ಲರ್/ಟ್ಯೂಷನ್ಸ್/ಆಫೀಸ್‌ಗಾಗಿ Ist Floorನಲ್ಲಿ ಬಾಡಿಗೆಗೆ ಇದೆ. ಮಾಮಾಸ್ ಜಾಯಿಂಟ್ ರೋಡ್, ಕಾರ್ನರ್ ಬಿಲ್ಡಿಂಗ್, ಎಂಸಿಸಿ ಬಿ ಬ್ಲಾಕ್, ದಾವಣಗೆರೆ.
82177 72482

ಬೇಕಾಗಿದ್ದಾರೆ
ಹೊಳಲ್ಕೆರೆ ತಾಲ್ಲೂಕಿನಲ್ಲಿರುವ ತೋಟವನ್ನು ನೋಡಿಕೊಳ್ಳಲು ಕುಟುಂಬವೊಂದು ಬೇಕಾಗಿದೆ.
ಸಂಪರ್ಕಿಸಿ
ಮೊ: 94484 39639
63665 96479

ಸೈಟ್‌ಗಳು ಮಾರಾಟಕ್ಕಿವೆ
ವಾಜಪೇಯಿ ಲೇಔಟ್‌ನಲ್ಲಿ, ಡಾಲರ್ಸ್ ಕಾಲೋನಿಯಲ್ಲಿ 30x50 West, 40x33East, 55x33 North East Corner, 30x45 East
ಐನಳ್ಳಿ ಚನ್ನಬಸಪ್ಪ ಏಜೆಂಟ್
93410 14130

ಬೇಕಾಗಿದ್ದಾರೆ
PUC ಪಾಸ್ ಆದ 28 ವರ್ಷದೊಳಗಿನ ಸದೃಢ ಯುವಕ, ಯುವತಿಯರು ನ್ಯುರೋಥೆರಪಿ ಕ್ಲಿನಿಕ್‌ನಲ್ಲಿ ಸಹಾಯಕರಾಗಿ ಕೆಲಸ ಮಾಡಲು ಬೇಕಾಗಿದ್ದಾರೆ. ಆಕರ್ಷಕ ಸಂಬಳ, ಉಚಿತ ವಸತಿ ವ್ಯವಸ್ಥೆ. ಸಂಪರ್ಕಿಸಿ
99726 00713

ಮನೆ ಲೀಸಿಗೆ ಮತ್ತು ಬಾಡಿಗೆಗೆ ದೊರೆಯುತ್ತದೆ
ಪಿ.ಜೆ. ಬಡಾವಣೆ, ರಾಮ್ ಅಂಡ್ ಕೋ ಹತ್ತಿರ ಮಹಡಿ ಮೇಲೆ 3BHK ದಕ್ಷಿಣ (ಸಸ್ಯಹಾರಿಗಳಿಗೆ ಮಾತ್ರ) ಬಾಡಿಗೆಗೆ ದೊರೆಯುತ್ತದೆ. ಎಂ.ಸಿ.ಸಿ 'ಎ' ಬ್ಲಾಕ್, ಪಶ್ಚಿಮ ಮಹಡಿ ಮೇಲೆ 2BHK ಲೀಸಿಗೆ ದೊರೆಯುತ್ತದೆ. ಸಂಪರ್ಕಿಸಿ
95911 60520
99457 02495

3 ಬೆಡ್ ರೂಂಗಳ ಮನೆ ಬಾಡಿಗೆಗೆ ಇದೆ
#1519/17 ಶ್ರೀ ಬಸವೇಶ್ವರ ಕೃಪ, ಶ್ರೀ ಸಂಜೀವಿನಿ ಆಂಜನೇಯ ಸ್ವಾಮಿ ದೇವಸ್ಥಾನದ ಹತ್ತಿರ, ಶಿವಕುಮಾರ ಸ್ವಾಮಿ ಬಡಾವಣೆ, 2ನೇ ಹಂತ ಹದಡಿ ರಸ್ತೆ, ಕೆನರಾ ಬ್ಯಾಂಕ್ ಹಿಂದೆ, ದಾವಣಗೆರೆ-5
97431 21419
83103 12057
ಬಿ.ಎನ್. ಬಸವರಾಜಪ್ಪ

ಕೆಲಸಕ್ಕೆ ಬೇಕಾಗಿದ್ದಾರೆ
ಜಗದಿ ಆರ್ ಓ ಸಿಸ್ಟಮ್ಸ್ ದಾವಣಗೆರೆ ಕಂಪ್ಯೂಟರ್ ಆಪರೇಟರ್, ಅಕೌಂಟ್ಸ್‌ನಲ್ಲಿ ಅನುಭವವಿರಬೇಕು ಟ್ಯಾಲಿ ಬರುವಂತಹ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ, ದಾವಣಗೆರೆಯವರಿಗೆ ಮಾತ್ರ.
87478 51343
91484 88226

ತಕ್ಷಣ ಬೇಕಾಗಿದ್ದಾರೆ
ಕಂಪ್ಯೂಟರ್ ಅನುಭವ ಇರುವ ಲೇಡಿ ಅಸಿಸ್ಟೆಂಟ್ ಬೇಕಾಗಿದ್ದಾರೆ. ವಿದ್ಯಾರ್ಹತೆ : ಯಾವುದೇ ಪದವಿ, ವೇತನ: 8000/-
ಕೆ.ಬಿ.ಆರ್ ಇಂಡಸ್ಟ್ರೀಸ್
ಆರ್.ಎಂ.ಸಿ.ಲಿಂಕ್ ರೋಡ್, ಬಿ.ಟಿ. ಲೇಔಟ್, ಮಹಾವೀರ ಭವನದ ಹತ್ತಿರ, ದಾವಣಗೆರೆ.
94484 42694

ಮನೆ ಮಾರಾಟಕ್ಕಿದೆ
ಸಿದ್ದವೀರಪ್ಪ ಬಡಾವಣೆ, 2ನೇ ಕ್ರಾಸ್‌ನಲ್ಲಿ 60x40 ಅಳತೆಯ ಗ್ರೌಂಡ್ ಫ್ಲೋರ್ ಮನೆ ಮಾರಾಟಕ್ಕಿದೆ. ಮುನ್ಸಿಪಲ್ / ಬೋರ್ ನೀರಿನ ವ್ಯವಸ್ಥೆ ಇದೆ.
88847 56252

ಬೇಕಾಗಿದ್ದಾರೆ
ITI ಅಥವಾ Diploma ಓದಿರುವವರು ಟ್ರ್ಯಾಕ್ಟರ್ ಶೋರೂಂನಲ್ಲಿ ಸೇಲ್ಸ್ & ಸರ್ವೀಸ್‌ಗಾಗಿ ಬೇಕಾಗಿದ್ದಾರೆ. ಸ್ವಂತ ಬೈಕ್ ಹೊಂದಿರಬೇಕು, ಡ್ರೈವಿಂಗ್ ಲೈಸೆನ್ಸ್ ಇರಬೇಕು.ಬಯೋಡಾಟಾದೊಂದಿಗೆ ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ
ಶಾರದ ಆಟೋಸ್
08192 236457, 78291 93243

ಬಾಡಿಗೆಗೆ
15 ರೂಂಗಳು ಹಾಗೂ ವಿಶಾಲವಾದ ಊಟದ ಹಾಲ್ ಬಾಡಿಗೆಗೆ ದೊರೆಯುತ್ತದೆ. ಪಿ.ಜಿ. ನಡೆಸುವವರಿಗೆ ಅಥವಾ ಕಾಲೇಜುಗಳಿಗೆ ಮೊದಲ ಆದ್ಯತೆ.
ಹೋಟೆಲ್ ಬಾಡಿಗೆಗೆ ಇದೆ
ಸರಸ್ವತಿ ಬಡಾವಣೆ, ನಿಟ್ಟುವಳ್ಳಿ, ದಾವಣಗೆರೆ.
81055 42689, 97419 44456

ನೇರ ಪರೀಕ್ಷೆಗಳು
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC, Technical & Non Technical Courses, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಮ್ & ಕೋ ಸರ್ಕಲ್, ದಾವಣಗೆರೆ.
87490 24789, 87620 58369
94837 64859, 82173 02649

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

ತಕ್ಷಣ ಕೆಲಸ
ಹುಡುಗಿಯರು, ಮಹಿಳೆಯರು ಹಾಗೂ ವಿಧವೆಯರು ನಮ್ಮ ಸಂಸ್ಥೆಯ ಮೂಲಕ ಮನೆಗಳಲ್ಲಿ ಉಳಿದುಕೊಂಡು ಹೋಂ ನರ್ಸಿಂಗ್ ಕೆಲಸ ಮಾಡಲು ಬೇಕಾಗಿದ್ದಾರೆ. (ತರಬೇತಿಯೊಂದಿಗೆ ಊಟ, ವಸತಿ ಉಚಿತವಾಗಿರುತ್ತದೆ) ನೋಂದಣಿಗಾಗಿ ಇಂದೇ ಸಂಪರ್ಕಿಸಿ
95136 58555
97423 84444

ಬಾಡಿಗೆಗಿದೆ
ಎಸ್.ನಿಜಲಿಂಗಪ್ಪ ಲೇಔಟ್‌ನಲ್ಲಿರುವ (ಲಕ್ಷ್ಮಿ ಫ್ಲೋರ್ ಮಿಲ್ ಹತ್ತಿರ) 2BHK ಹೊಂದಿರುವ ಮನೆಯು ಬಾಡಿಗೆ ಇದೆ. (ಸಸ್ಯಹಾರಿಗಳಿಗೆ ಮಾತ್ರ)
86608 72376

ಕೆಲಸವಿಲ್ಲದೇ ಖಾಲಿ ಇರುವವರಿಗೆ ಒಂದು ಸುವರ್ಣಾವಕಾಶ
ಕೇವಲ ರೂ 15000/- ತೊಡಗಿಸಿ ನಂತರ ನಿಮ್ಮ ಶಕ್ತಿಯಾನುಸಾರ ಕೈ ತುಂಬಾ ಹಣವನ್ನು ಗಳಿಸಿರಿ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
99016 32524

ಆಫೀಸ್ ಬಾಯ್ ಕಮ್ ಡ್ರೈವರ್ ಬೇಕಾಗಿದ್ದಾರೆ.
ಸಂಪರ್ಕಿಸಿರಿ :
ಫೋ. : 97391 92779

ಬೇಕಾಗಿದ್ದಾರೆ
ದಾವಣಗೆರೆ ನಗರದ ಪ್ರಸಿದ್ಧ ಬಂಗಾರದ ಅಂಗಡಿಯಲ್ಲಿ ಕೆಲಸ ಮಾಡಲು
ಮಾರಾಟ ಪ್ರತಿನಿಧಿಗಳು
(Sales Executives)
ತಕ್ಷಣ ಬೇಕಾಗಿದ್ದಾರೆ
ಆಸಕ್ತರು ಈ ಕೆಳಗಿನ ನಂಬರ್‌ಗೆ ಕರೆ ಮಾಡಿ ಅಥವಾ ತಮ್ಮ ಬಯೋಡೇಟಾವನ್ನು ವಾಟ್ಸಾಪ್ ಅಥವಾ ಕೆಳಗಿನ ಮೇಲ್ ಐಡಿಗೆ ಕಳುಹಿಸಿ.
93803 50327
davanagerejobs@gmail.com

ಭೂಮಿಕಾ ಮ್ಯಾಟ್ರಿಮೊನಿ
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576
90080 55813

ಸಾಲಗಳಿಗೆ ಸಂಪರ್ಕಿಸಿ
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ) ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ. (ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

ಜಮೀನು ಮಾರಾಟಕ್ಕಿದೆ
ಮಿಟ್ಲಕಟ್ಟೆ ಗ್ರಾಮದ ರಿ.ಸ.ನಂ.7/16 ರಲ್ಲಿ 17 ಗುಂಟೆ ಜಮೀನು ಮೇನ್ ರೋಡ್ ಪಕ್ಕ, ಮಿಟ್ಲಕಟ್ಟೆ, ಶಾಮನೂರು ರಸ್ತೆ, ಶಾಮನೂರಿಂದ 3 ಕಿ.ಮೀ ಇದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
87220 14318, 95352 69849

Smart city Cabs Davanagere
Etios 4+1 A/c, Minimum 4 Km Rs 100/-, above per kms. Rs 10/- Waiting Charages - 1 Hour Rs. 100/-, 4,8,12 Hour Packages
Call 08192 255555, 99868 18205

ನೀರಿನ ಲೀಕೇಜ್
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

ಡಾ|| ಸೋಮಶೇಖರ್. ಎಸ್.ಎ.
Rheumatologist ಇವರು
ದಿ. 01.04.2021ರ ಗುರುವಾರ ಮತ್ತು 02.04.2021ರ ಶುಕ್ರವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

JOBS
MCS ACADEMY
Training & Placement Cell
98444 92888

UPS BATTERY & RO PURIFIERS
Sales & Service
PEACE ENTERPRISES
83100 42490, 99013 18277
98801 56667

ಶ್ರೀ ಮಾತಾ ಗಂಗಾದೇವಿ ಜ್ಯೋತಿಷ್ಯಂ
ಪಂಡಿತ್ ಎಂ.ಜಿ. ರಾವ್
ನಿಮ್ಮ ಯಾವುದೇ ಗುಪ್ತ ಸಮಸ್ಯೆ ಇದ್ದರೂ ಇವರಿಗೆ ನೇರವಾಗಿ ಭೇಟಿ ಕೊಡಿ. 3 ದಿನಗಳಲ್ಲಿ ಪರಿಹಾರ ಆಗುತ್ತದೆ. ವಿಳಾಸ : ಸರಸ್ವತಿಪುರಂ 8ನೇ ಮೇನ್, 14 ನೇ ಕ್ರಾಸ್ ಆದಿಶಕ್ತಿ ದೇವಸ್ಥಾನದ ಎದುರುಗಡೆ, ಮನೆ ನಂ. 2, ಮೈಸೂರು.
90086 08474
ಕರೆ ಮೂಲಕ ನಿಮ್ಮ ಸಮಸ್ಯೆ ಹೇಳಿಕೊಳ್ಳಿರಿ. ನಿಮ್ಮ ಎಲ್ಲಾ ಕಠಿಣ ಸಮಸ್ಯೆಗೆ ಸ್ಪಂದಿಸುವರು

Commercial Property for sale
infront of aralimara bus stop 15x35 ground and 2BHK at 1st floor
Contact 92417 50559

ಬೇಕಾಗಿದ್ದಾರೆ
ಬಟ್ಟೆ ಅಂಗಡಿಗೆ 18 ರಿಂದ 25 ವರ್ಷದೊಳಗಿನ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯ ಇರುತ್ತದೆ. ಸಂಪರ್ಕಿಸಿ
ಮಹೇಂದ್ರಕರ್ ಟೆಕ್ಸ್‌ಟೈಲ್ಸ್
ನರಸರಾಜ ರಸ್ತೆ, (ಮಂಡಿಪೇಟೆ) ದಾವಣಗೆರೆ.
90367 34919

# ನಾಡಿನ ಹಿರಿಮೆಯಲ್ಲಿ ಮಠಗಳ ಪಾತ್ರ ಹೆಚ್ಚು

## ಯಲವಟ್ಟಿ ಸಿದ್ಧಾಶ್ರಮದ ಕಾರ್ಯಕ್ರಮದಲ್ಲಿ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ



ಮಲೇಬೆನ್ನೂರು, ಮಾ.31- ನಮ್ಮ ನಾಡಿನ ಹಿರಿಮೆಯಲ್ಲಿ ಮಠ-ಮಾನ್ಯಗಳ ಪಾತ್ರ ಹೆಚ್ಚಿದೆ ಎಂದು ದಾವಣಗೆರೆ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ ಹೇಳಿದರು.

ಯಲವಟ್ಟಿ ಗ್ರಾಮದ ಶ್ರೀ ಗುರು ಸಿದ್ಧಾಶ್ರಮ ದಲ್ಲಿ ಹಮ್ಮಿಕೊಂಡಿದ್ದ ಬ್ರಹ್ಮಲೀನ ಸದ್ಗುರು ಶ್ರೀ ಶಿವಾನಂದ ಸ್ವಾಮೀಜಿ ಹಾಗೂ ಶ್ರೀ ನಿತ್ಯಾನಂದ ಸ್ವಾಮೀಜಿಯವರ ಪುಣ್ಯಾರಾಧನೆ ಕಾರ್ಯಕ್ರಮ ದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ವಿಶೇಷವಾಗಿ ರಾಜ್ಯದಲ್ಲಿ ಸರ್ಕಾರ ಮಾಡಬೇಕಾಗಿದ್ದ ಎಷ್ಟೋ ಕೆಲಸಗಳನ್ನು ಮಠಗಳು ಮಾಡುತ್ತಾ ಬಂದಿವೆ. ಸ್ವಾತಂತ್ರ್ಯ ಪೂರ್ವದಲ್ಲೇ ಜನರಿಗೆ ಶಿಕ್ಷಣ ಹಾಗೂ ಅನ್ನ ದಾಸೋಹ ಮಾಡಿ ರುವ ಮಠಗಳು, ಇಂದು ಲಕ್ಷಾಂತರ ಜನರ ಬದುಕು ಭದ್ರವಾಗುವಂತೆ ಮಾಡಿವೆ. ಸರ್ಕಾರ ಯಲವಟ್ಟಿ ಮಠ ಸೇರಿದಂತೆ, ಎಲ್ಲಾ ಸಣ್ಣಪುಟ್ಟ ಮಠಗಳಿಗೂ ನೆರವು ನೀಡಿ, ಅವುಗಳ ಶಕ್ತಿ ಹೆಚ್ಚಿಸಬೇಕು ಎಂದು ಮನವಿ ಮಾಡಿದ ನಿಖಿಲ್, ಯುವಕರು ಮಠಗಳ ಸಂಪರ್ಕ ಬೆಳೆಸಿಕೊಂಡು, ಅಧ್ಯಾತ್ಮದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಂತೆ ಕರೆ ನೀಡಿದರು.

ನಮ್ಮ ತಾತ ಕೊಂಡಜ್ಜಿ ಬಸಪ್ಪನವರು ಸಿದ್ಧಾರೂಢರ ಭಕ್ತರಾಗಿದ್ದರು. ಸಿದ್ಧಾಶ್ರಮದ ಅಭಿವೃದ್ಧಿಗೆ ವಿಧಾನ ಪರಿಷತ್ ಸದಸ್ಯ ಮೋಹನ್ ಕುಮಾರ್ ಕೊಂಡಜ್ಜಿ ಅನುದಾನ ನೀಡುವುದಾಗಿ ಭರವಸೆ ನೀಡಿದರಲ್ಲದೆ, ತಕ್ಷಣವೇ ಹೈಮಾಸ್ಟ್ ದೀಪ ಅಳವಡಿಸುವುದಾಗಿ ತಿಳಿಸಿದರು.

ಹದಡಿ ಚಂದ್ರಗಿರಿ ಮಠದ ಶ್ರೀ ಮುರುಳೀಧರ ಸ್ವಾಮೀಜಿ ಮಾತನಾಡಿ, ಗುರುವಿನ ಸಂಗದಿಂದ ಪರಮಾನಂದವಾಗುತ್ತದೆ. ಗುರುವಿನ ಭಕ್ತರಾದವರು ಹೆಚ್ಚು ಕಲ್ಯಾಣ ಸಾಧಿಸಲು ಸಾಧ್ಯವಾಗುತ್ತದೆ ಎಂದರು.

### ಸಣ್ಣ ಮಠಗಳಿಗೂ ಸರ್ಕಾರ ನೆರವು ನೀಡಲಿ

ಹೋತನಹಳ್ಳಿಯ ಸಿದ್ಧಾರೂಢ ಮಠದ ಶ್ರೀ ಶಂಕರಾನಂದ ಸ್ವಾಮೀಜಿ ಮಾತನಾಡಿ, ನಮ್ಮ ಒಳ್ಳೆಯ ಮನಸ್ಸಿನ ಕೆಲಸ-ಸೇವೆಗಳು ನಮಗೆ ಹೆಚ್ಚು ಶಾಂತಿ, ನೆಮ್ಮದಿ ತಂದು ಕೊಡುತ್ತವೆ. ಈ ನಿಟ್ಟಿನಲ್ಲಿ ಜನರು ಒಳ್ಳೆಯ ಆಲೋಚನೆಗಳನ್ನು ಮಾಡಿ, ಧಾರ್ಮಿಕತೆಯನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ನರಸಾಪುರದ ಶ್ರೀ ಅಭಿನವ ಸಿದ್ಧರಾಮ ಶಿವಯೋಗಿ, ಯಕ್ಕನಹಳ್ಳಿಯ ಶ್ರೀ ಕೃಷ್ಣಾನಂದ ಭಾರತಿ ಸ್ವಾಮೀಜಿ, ಮಣಕೂರಿನ ಶ್ರೀ ಚನ್ನಬಸಮ್ಮ ತಾಯಿ ಮಾತನಾಡಿ, ಯಾರು ನುಡಿದಂತೆ ನಡೆದುಕೊಳ್ಳುತ್ತಾರೋ ಅವರು ಬದುಕಿನಲ್ಲಿ ತಡವಾದರೂ ಸಾಧಕರಾಗುತ್ತಾರೆ ಎಂದರು.

ದಾವಣಗೆರೆ ಜಡೆ ಸಿದ್ಧ ಶಿವಯೋಗೀಶ್ವರ ಮಠದ ಶ್ರೀ ಶಿವಾನಂದ ಸ್ವಾಮೀಜಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಮನುಷ್ಯ ವ್ಯಾಮೋಹಗಳಿಂದ ದೂರವಿದ್ದರೆ ಮಾತ್ರ ನೆಮ್ಮದಿ ಇರಲು ಸಾಧ್ಯ. ಗುರುವಿನ ಕರುಣೆ ಪಡೆದವರು ಜೀವನದಲ್ಲಿ ಎಂದಿಗೂ ಸೋಲಲು ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದರು.

ಶ್ರೀ ಯೋಗಾನಂದ ಸ್ವಾಮೀಜಿ ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿ, ಬ್ರಹ್ಮಲೀನ ಸದ್ಗುರುಗಳ ಪವಾಡ ಶ್ರೀ ಮಠದಲ್ಲಿ ಯಾವತ್ತೂ ಇರುತ್ತದೆ ಎಂಬುದಕ್ಕೆ ನಾವು ಮಾಡುವ ಕೆಲಸಗಳಿಗೆ ಭಕ್ತರು ನೀಡುವ ಸಹಕಾರವೇ ಸಾಕ್ಷಿ ಎಂದರು. ಡಿಸಿಸಿ ಬ್ಯಾಂಕಿನ ನಿರ್ದೇಶಕ ಸಿರಿಗೆರೆ ಹಾಲೇಶಪ್ಪ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಜಿ. ಆಂಜನೇಯ, ಗ್ರಾಮದ ಮುರುಗೆಪ್ಪಗೌಡ್ರು, ಜಿ. ಬಸಪ್ಪ ಮೇಷ್ಟ್ರು, ಹೊಸಮನಿ ಮಲ್ಲಪ್ಪ, ಎ. ಸುರೇಶ್, ಕುಂಬಳೂರಿನ ಸದಾಶಿವ, ಜಿಗಳಿಯ ರಂಗಪ್ಪ ಇನ್ನಿತರರು ಭಾಗವಹಿಸಿದ್ದರು.

ದೀಕ್ಷಾ, ಕೃತ್ತಿಕಾ, ಚೇತನ ತಂಡ ನಡೆಸಿಕೊಟ್ಟ ಶಿವತಾಂಡವ ನೃತ್ಯ ಗಮನ ಸೆಳೆಯಿತು. ಕುಂಬಳೂರು ಕುಬೇರಪ್ಪ ಪ್ರಾರ್ಥಿಸಿದರು. ಪ್ರವಚನಕಾರ ಸಿರಿಗೆರೆ ಸಿದ್ದೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಪಿಎಸಿಎಸ್ ಸಿಇಒ ಶೇಖರಪ್ಪ ನಿರೂಪಿಸಿ, ವಂದಿಸಿದರು.

# ಗುರುವಿನಲ್ಲಿ ಶ್ರದ್ಧೆ, ಭಕ್ತಿ ಹೊಂದಿದಾಗ ಜೀವನ ಸಾರ್ಥಕ



**ಆವರಗೊಳ್ಳ ಶ್ರೀ**

ದಾವಣಗೆರೆ, ಮಾ. 31- ಗುರುವಿನಲ್ಲಿ ಪ್ರತಿಯೊಬ್ಬರೂ ಶ್ರದ್ಧೆ, ನಿಷ್ಠೆ, ಭಕ್ತಿ ಹೊಂದಿದಾಗ ಜೀವನ ಸಾರ್ಥಕವಾಗುತ್ತದೆ ಎಂದು ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು. ಶ್ರೀಗಳು ನಗರಕ್ಕೆ ಸಮೀಪದ ಬಾಡಾ ಕ್ರಾಸ್ ಬಳಿ ಇರುವ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಶಿವಾನುಭವಗೋಷ್ಠಿ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದರು.

ಗುರುವಿನ ಸ್ಥಾನ ಶ್ರೇಷ್ಠವಾಗಿದ್ದು, ಅಧ್ಯಾತ್ಮಿಕ ಜ್ಞಾನವನ್ನು ಭಕ್ತರಿಗೆ ನೀಡುವ ಸಾಮರ್ಥ್ಯವನ್ನು ಗುರು ಹೊಂದಿದ್ದಾನೆ ಎಂದು ಹೇಳಿದರು.

ರಾಜ - ಮಹಾರಾಜರೂ ಸಹ ಗುರುವನ್ನು ಗೌರವದಿಂದ ಕಾಣುತ್ತಿದ್ದರು, ಅನೇಕ ಮಹಾಪುರುಷರು ಗುರುವಿನ ಮಾರ್ಗದರ್ಶನದಿಂದ ತಮ್ಮ ಜೀವನದಲ್ಲಿ ಶ್ರೇಷ್ಠ ಸ್ಥಾನ ಪಡೆದಿದ್ದಾರೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಆಶ್ರಮದ ಕಾರ್ಯದರ್ಶಿ ಎ.ಹೆಚ್. ಶಿವಮೂರ್ತಿಸ್ವಾಮಿ, ಸುಮಾರು 3 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿರುವ ನೂತನ ಶಿಲಾಮಂಟಪವನ್ನು ಮುಖ್ಯಮಂತ್ರಿ ಯಡಿಯೂರಪ್ಪ ಅವರು ಲೋಕಾರ್ಪಣೆಗೊಳಿಸುವರು ಎಂದು ತಿಳಿಸಿದರು.

ಅತಿಥಿಗಳಾಗಿ ಆಶ್ರಮದ ಸಹ ಕಾರ್ಯದರ್ಶಿ ಜೆ.ಎನ್. ಕರಿಬಸಪ್ಪ, ನಿರ್ದೇಶಕ ಬಸವನಗೌಡರು, ಹಿರಿಯ ಪತ್ರಕರ್ತ ಬಕ್ಕೇಶ್ ನಾಗನೂರು, ಹಿರಿಯ ಮುಖಂಡರಾದ ವಾಮದೇವಪ್ಪ, ಬಸವರಾಜಪ್ಪ ಭಾಗವಹಿಸಿದ್ದರು.

ಆಶ್ರಮದ ಅಂಧ ಮಕ್ಕಳು ಹಾಗೂ ವರ್ಷಾ ಪ್ರಾರ್ಥಿಸಿದರು. ಪಂಚಾಕ್ಷರಿ ಅವರು ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

# ಕಡ್ಲೆಬಾಳು ಪ್ರಾಥಮಿಕ ಸಹಕಾರ ಸಂಘದ ಅಧ್ಯಕ್ಷರಾಗಿ ಸತ್ಯನಾರಾಯಣ

**(1ನೇ ಪುಟದಿಂದ)** ಪತ್ತಿನ ಸಹಕಾರ ಸಂಘದ ಹಾಲಿ ನಿರ್ದೇಶಕರು ಹಾಗೂ ಮಾಜಿ ಅಧ್ಯಕ್ಷ ಹೆಚ್.ಎಸ್. ಉಜ್ಜಪ್ಪ, ಕಡ್ಲೆಬಾಳು ಗ್ರಾ.ಪಂ. ಮಾಜಿ ಅಧ್ಯಕ್ಷರು, ಹಾಲಿ ಸದಸ್ಯ ಬಿ.ಕೆ. ಪರಶುರಾಮ, ಸಂಘದ ನಿರ್ದೇಶಕರುಗಳು, ಕಾರ್ಯದರ್ಶಿ ಜಿ. ಹನುಮಂತಪ್ಪ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಸಹಕಾರ ಅಭಿವೃದ್ಧಿ ಅಧಿಕಾರಿ ಸುರೇಂದ್ರ ಚುನಾವಣಾಧಿಕಾರಿಯಾಗಿದ್ದರು.

# ಮೊಬೈಲ್ ಟವರ್ ಸ್ಥಾಪನೆಗೆ ಆಕ್ಷೇಪ

**ಓದುಗರ ಪತ್ರ**

**ಮಾನ್ಯರೇ,**

ದಾವಣಗೆರೆಯ ಮಿಲ್ಲತ್ ಕಾಲೋನಿಯ ರಿಂಗ್ ರೋಡ್ 4ನೇ ವಾರ್ಡ್ ಎಸ್.ಎಸ್. ಶಾದಿ ಮಹಲ್ ಪಕ್ಕದ ಹಸೀನಾ ಬಾನು ಅವರ ಆರ್.ಸಿ.ಸಿ. ಮನೆಯ ಮೇಲೆ ಮೊಬೈಲ್ ಟವರ್ ಸ್ಥಾಪನೆ ಮಾಡುವುದಕ್ಕೆ ನಾಗರಿಕರು ಆಕ್ಷೇಪ ವ್ಯಕ್ತ ಪಡಿಸಿದ್ದಾರೆ.

ಮೊಬೈಲ್ ಟವರ್ ಸ್ಥಾಪನೆಗೆ ಎನ್‌ಒಸಿ ತರಲು ಟ್ರಾಯ್ ಆದೇಶಿಸಿದೆ. ಆದರೆ ಎನ್‌ಒಸಿ ಇಲ್ಲದೇ, ಸ್ಥಳೀಯರು ಸಮ್ಮತಿ ಕೂಡ ಇಲ್ಲದೇ ರಿಲಾಯನ್ಸ್ ಜಿಯೋ ಕಂಪನಿಯವರು ನಿಯಮ ಉಲ್ಲಂಘಿಸಿ ಹೈ ಆಕ್ಸಿಲಿರೇಷನ್ ಮೊಬೈಲ್ ಟ್ರಾನ್ಸ್ ಮಿಷನ್ ಟವರ್‌ಗಳನ್ನು ಕೂರಿಸುತ್ತಿದ್ದಾರೆ. ಇದು ಅಕ್ಷಮ್ಯನ ಅಪರಾಧವಾಗಿದೆ. ಮೊಬೈಲ್ ಟವರ್‌ಗಳಿಂದ ಹೊರಹೊಮ್ಮುವ ತರಂಗಗಳಿಂದ ಪಶು, ಪಕ್ಷಿಗಳ ಜೀವಕ್ಕೆ ಹಾನಿಯಾಗಲಿದೆ. ಇದರಿಂದ ಜನರಿಗೂ ತೊಂದರೆಯಾಗುವ ಕಾರಣ ಟವರ್ ಸ್ಥಾಪನೆಗೆ ಆಕ್ಷೇಪ ವ್ಯಕ್ತಪಡಿಸಿ, ಮಹಾನಗರ ಪಾಲಿಕೆಗೆ ಮನವಿ ಸಲ್ಲಿಸಲಾಗಿತ್ತು. ಆ ಸಂದರ್ಭದಲ್ಲಿ ಸ್ವಲ್ಪ ದಿನ ಮುಂದೂಡಿದ್ದರು. ಪುನಃ ಟವರ್ ಸ್ಥಾಪನೆಗೆ ಸಿದ್ದತೆ ನಡೆಯುತ್ತಿದ್ದು, ಟವರ್‌ನಿಂದಾಗುವ ತೊಂದರೆ ತಪ್ಪಿಸಿ ಜನರನ್ನು ರೋಗಗಳಿಂದ ಮುಕ್ತರನ್ನಾಗಿ ಮಾಡುವಂತೆ ಮನವಿ ಮಾಡಿದ್ದಾರೆ.


**- 4ನೇ ವಾರ್ಡ್ ನಾಗರಿಕರು,** ದಾವಣಗೆರೆ.

# ಲಸಿಕೆ ಪಡೆದ ಬಿಜೆಪಿ ಮುಖಂಡ ಜೆ. ಸೋಮನಾಥ್



ದಾವಣಗೆರೆ, ಮಾ.31 - ಹಿರಿಯ ಬಿಜೆಪಿ ಮುಖಂಡ ಜೆ. ಸೋಮನಾಥ್ ಅವರು ಇಂದು ಚಿಗಟೇರಿ ಸರ್ಕಾರಿ ಆಸ್ಪತ್ರೆಯಲ್ಲಿ ಕೋವಿಶೀಲ್ಡ್ ಲಸಿಕೆ ಪಡೆದಿದ್ದಾರೆ. 45 ವರ್ಷ ಮೇಲ್ಪಟ್ಟ ಎಲ್ಲರೂ ಕಡ್ಡಾಯವಾಗಿ ಲಸಿಕೆ ಹಾಕಿಸಿ ಸುರಕ್ಷತೆಯಿಂದ ಇರೋಣ ಎಂದು ಸೋಮಣ್ಣ ತಿಳಿಸಿದ್ದಾರೆ.

# ಜಗಳೂರು : ಹೊಸಕೆರೆಯಲ್ಲಿ ಸತ್ಯಮ್ಮ ದೇವಿ ರಥೋತ್ಸವ



ಜಗಳೂರು, ಮಾ.31- ತಾಲ್ಲೂಕಿನ ಹೊಸಕೆರೆ ಗ್ರಾಮದಲ್ಲಿ ಸತ್ಯಮ್ಮ ದೇವಿ ರಥೋತ್ಸವ ಅದ್ಧೂರಿಯಾಗಿ ಜರುಗಿತು.

ನೆರೆಹೊರೆಯ ಗ್ರಾಮಗಳಿಂದ ಆಗಮಿಸಿದ ಭಕ್ತ ಸಮೂಹ ರಥಕ್ಕೆ ಬಾಳೆ ಹಣ್ಣು, ತೆಂಗಿನಕಾಯಿ, ಉತ್ತತ್ತಿ ಸಮರ್ಪಿಸಿ ಭಕ್ತಿ ಪರ್ವ ಮೆರೆದರು. ರಥೋತ್ಸವಕ್ಕೂ ಮುನ್ನ ದೇವಸ್ಥಾನದಲ್ಲಿ ಸಾಂಪ್ರದಾಯಿಕ ಪೂಜಾ ಕೈಂಕರ್ಯ ನಡೆಸಲಾಯಿತು. ದೇವಿ ಬಳಿ ಸಂತಾನ, ಕಂಕಣ ಭಾಗ್ಯಗಳ ಹರಕೆ ಹೊತ್ತು ಸಫಲತೆ ಕಂಡವರು ತಮ್ಮ ಹರಕೆ ತೀರಿಸಿದರು. ಗ್ರಾಮದಲ್ಲಿ ಮೂರು ದಿನಗಳ ರಥೋತ್ಸವ ಜಾತ್ರೆ ಹಮ್ಮಿಕೊಳ್ಳಲಾಗಿದ್ದು, ರಥೋತ್ಸವದ ಮರುದಿನ ಬೆಲ್ಲದ ಗಾಡಿಯೊಂದಿಗೆ ಸರದಿ ಸಾಲಿನಲ್ಲಿ ಬೆಲ್ಲದ ಪಾನೀಯ ಹಂಚುವುದು ಸಾಮರಸ್ಯ ಜೀವನದ ಸಂಕೇತದ ಸಂಪ್ರದಾಯವಾಗಿದೆ.



# ಹನಗವಾಡಿ: ಇಂದು ರಥೋತ್ಸವ

ಹರಿಹರ ಸಮೀಪದ ಹನಗವಾಡಿಯ ಶ್ರೀ ವೀರಭದ್ರೇಶ್ವರ ದೇವರ ರಥೋತ್ಸವವು ಇಂದು ಸಂಜೆ 5.30ಕ್ಕೆ ಜರುಗಲಿದೆ. ನಾಳೆ ಶುಕ್ರವಾರ ಬೆಳಿಗ್ಗೆ 7.30 ರಿಂದ 12.30 ರವರೆಗೆ ದೇವರ ಗುಗ್ಗಳ ಇರುತ್ತದೆ.

# ಉದ್ಯೋಗ ಮೇಳ : ಅಭ್ಯರ್ಥಿಗಳ ಆಯ್ಕೆ

ದಾವಣಗೆರೆ, ಮಾ. 31 - ನಗರದ ಶ್ರೀ ಮಲ್ಲಿಕಾರ್ಜುನ ಕೈಗಾರಿಕಾ ತರಬೇತಿ ಕೇಂದ್ರದ ಆವರಣದಲ್ಲಿ ನಡೆದ ಉದ್ಯೋಗ ಮೇಳದಲ್ಲಿ 110 ಅಭ್ಯರ್ಥಿಗಳು ಹಾಜರಾಗಿದ್ದು, 56 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಉದ್ಯೋಗ ಪತ್ರ ವಿತರಿಸಲಾಯಿತು. ಉದ್ಯೋಗ ಮೇಳದಲ್ಲಿ ಶ್ರೀ ಮಲ್ಲಿಕಾರ್ಜುನ ಸಮೂಹ ಸಂಸ್ಥೆ ಅಧ್ಯಕ್ಷ ಎನ್.ಜೆ. ಗುರುಸಿದ್ದಯ್ಯ ಅಭ್ಯರ್ಥಿಗಳಿಗೆ ಶುಭ ಹಾರೈಸಿದರು. ಉಪ ಪ್ರಾಂಶುಪಾಲ ಹನುಮಂತರಾವ್ ಸಿಂಧೆ, ಪ್ಲೇಸ್ ಮೆಂಟ್ ಅಧಿಕಾರಿ ಅನೂಪ್ ಕುಮಾರ್, ವಿ.ಎಸ್.ಎಸ್. ಎಂಟರ್‌ಪ್ರೈಸಸ್ ಮ್ಯಾನೇಜಿಂಗ್ ಡೈರೆಕ್ಟರ್ ಮೊಹಮದ್ ಅಪ್ಸರ್ ಮತ್ತಿತರರಿದ್ದರು.

# ಉಪಚುನಾವಣೆಯಲ್ಲಿ ಕಾಂಗ್ರೆಸ್- ಜೆಡಿಎಸ್ ಮಹಿಳಾ ಅಭ್ಯರ್ಥಿಗಳ ಗೆಲುವು






ಕೂಡ್ಲಿಗಿ, ಮಾ.31- ಕೂಡ್ಲಿಗಿ ಪಟ್ಟಣ ಪಂಚಾಯ್ತಿಯ 1 ಮತ್ತು 12 ನೇ ವಾರ್ಡ್‌ಗಳಿಗೆ ಮಾ. 29 ರಂದು ನಡೆದ ಉಪ ಚುನಾವಣೆಯ ಮತ ಎಣಿಕೆ ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಡೆಯಿತು. ಚುನಾವಣಾಧಿಕಾರಿ ಕೆ. ವಾಮದೇವ್ ಫಲಿತಾಂಶ ಘೋಷಿಸಿದರು.

ಒಂದನೇ ವಾರ್ಡ್‌ನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಲೀಲಾವತಿ ಪ್ರಭಾಕರ್ 237 ಮತಗಳನ್ನು ಪಡೆದು ಆಯ್ಕೆಯಾದರು. ಬಿಜೆಪಿ ಅಭ್ಯರ್ಥಿ ಎಂ.ವಿ. ಪ್ರಕಾಶ್ ನಾಯ್ಕ್ 186 ಹಾಗೂ ಜೆಡಿಎಸ್‌ನ ಬಿ. ನಾಗರಾಜ 167 ಮತಗಳನ್ನು ಪಡೆದರು.

12ನೇ ವಾರ್ಡ್‌ನಲ್ಲಿ ಜೆಡಿಎಸ್‌ನ ಬಡಭೀಮಯ್ಯನವರ ಸರಸ್ವತಿ ರಾಘವೇಂದ್ರ 457 ಮತಗಳನ್ನು ಪಡೆದು ಜಯದ ನಗೆ ಬೀರಿದರು. ಪ್ರತಿಸ್ಪರ್ಧಿಗಳಾಗಿದ್ದ ಬಿಜೆಪಿಯ ಮಲ್ಲಮ್ಮ ಸೋಮಯ್ಯನವರ ನಾಗರಾಜ 251 ಮತಗಳನ್ನು ಪಡೆದರೆ, ಕಾಂಗ್ರೆಸ್ ಅಭ್ಯರ್ಥಿ ಮಾಲಿಗಿ ರೂಪಾ ಮಂಜುನಾಥ್ 241 ಮತಗಳು, ಪಕ್ಷೇತರ ಅಭ್ಯರ್ಥಿ ಕೆ. ವಾಣಿ ರಮೇಶ್ 39 ಮತಗಳನ್ನು ಪಡೆದಿದ್ದಾರೆ. ಎರಡೂ ವಾರ್ಡ್‌ಗಳಲ್ಲಿ ಆಡಳಿತಾರೂಢ ಬಿಜೆಪಿ ಅಭ್ಯರ್ಥಿಗಳು ಪರಾಜಯಗೊಂಡಿರುವುದು ಆಶ್ಚರ್ಯ ಮೂಡಿಸಿದೆ.

# ದೇವೇಗೌಡ ಶೀಘ್ರ ಗುಣಮುಖರಾಗಲಿ




ದಾವಣಗೆರೆ, ಮಾ. 31- ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಹಾಗೂ ಅವರ ಪತ್ನಿ ಚನ್ನಮ್ಮ ಅವರು ಕೊರೊನಾ ಸೋಂಕಿಗೆ ತುತ್ತಾಗಿ ಚಿಕಿತ್ಸೆ ಪಡೆಯುತ್ತಿದ್ದು, ಶೀಘ್ರ ಗುಣಮುಖರಾಗಲಿ ಎಂದು ರೈತ ಮುಖಂಡ ಎನ್.ಜಿ. ಪುಟ್ಟಸ್ವಾಮಿ ಆಶಿಸಿದ್ದಾರೆ. ದೇಶ ಕಂಡ ಅಪರೂಪದ ರಾಜಕಾರಣಿಗಳಲ್ಲಿ ಒಬ್ಬರಾದ ಹೆಚ್.ಡಿ. ದೇವೇಗೌಡರು ನನ್ನ ರಾಜಕೀಯ ಗುರುಗಳೂ ಆಗಿದ್ದು, ಶೀಘ್ರ ಗುಣವಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗಲಿ ಎಂದಿದ್ದಾರೆ.

# ಇಂದು ಹುತಾತ್ಮರ ದಿನಾಚರಣೆ

ಸಿಪಿಐ, ಎಐಟಿಯುಸಿ ಜಿಲ್ಲಾ ಮಂಡಳಿಯಿಂದ ಹುತಾತ್ಮ ದಿನಾಚರಣೆ. ಸ್ಥಳ : ಆವರಗೆರೆ. ಸಮಯ : ಬೆಳಿಗ್ಗೆ 11 ಕ್ಕೆ. ಅಧ್ಯಕ್ಷತೆ ಹೆಚ್.ಕೆ. ರಾಮಚಂದ್ರಪ್ಪ.

## ಕಾಣೆಯಾಗಿದ್ದಾರೆ



ಈ ಚಿತ್ರದಲ್ಲಿರುವ ವೃದ್ಧೆಯು ದಿನಾಂಕ 17.03.2021 ರಂದು ಬೆಳಗ್ಗೆ 10.25 ಕ್ಕೆ ಮನೆಯಿಂದ ಕಾಣೆಯಾಗಿದ್ದು ಯಾರಿಗಾದರು ಸಿಕ್ಕಲ್ಲಿ ಹತ್ತಿರ ಪೊಲೀಸ್ ಠಾಣೆ ಅಥವ 9036314698 ಈ ಫೋನ್ ನಂಬರ್‌ಗೆ ಸಂಪರ್ಕಿಸಲು ಕೋರಿಕೆ. ಕಾಣೆಯಾದವರ ಚಹರೆ: ಹೆಸರು: ಪದ್ಮಾವತಮ್ಮ. ವಯಸ್ಸು: 70 ವರ್ಷ. ಸಾಧಾರಣಾ ಮೈಕಟ್ಟು, ದುಂಡುಮುಖ, ಗೋಧಿ ಮೈಬಣ್ಣ, 5 ಅಡಿ ಎತ್ತರ, ಬಿಳಿ ತಲೆಗೂದಲು, ಕಾಣೆಯಾಗುವಾಗ ಕೆಂಪು ಗೋಧಿ ಬಣ್ಣದ ನೈಟಿ ಧರಿಸಿರುವ ಇವರು ಕನ್ನಡ ಭಾಷೆ ಮಾತನಾಡುತ್ತಾರೆ.

**ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ**




# ಜಿಎಂಐಟಿಯ ವೇದಶ್ರೀಗೆ ರ್‍ಯಾಂಕ್



ದಾವಣಗೆರೆ, ಮಾ. 31- ನಗರದ ಜಿಎಂಐಟಿ ಕಾಲೇಜಿನ ಬಯೋ ಟೆಕ್ನಾಲಜಿ ವಿಭಾಗದ 2016 ಬ್ಯಾಚ್‌ನ ವಿದ್ಯಾರ್ಥಿನಿ ಎನ್.ಡಿ. ವೇದಶ್ರೀ ಬಿ.ಇ. ಬಯೋಟೆಕ್ನಾಲಜಿಯಲ್ಲಿ 8ನೇ ರ್‍ಯಾಂಕ್ ಪಡೆದಿದ್ದಾರೆ.

**ಯುಗಾದಿ ವಿಶೇಷ ಚಿಕಿತ್ಸೆ (ರಿಯಾಯಿತಿ ದರದಲ್ಲಿ)**

ವಸಂತ ಋತುವಿನ ಯುಗಾದಿ ಹಬ್ಬಕ್ಕೆ ದೇಹದ ಅಭ್ಯಂಗ (ಮಸಾಜ್) ಬಹು ಮುಖ್ಯ ಭಾಗ, ದೇಹದ ಮೂಳೆಗಳಿಗೆ, ಚರ್ಮದ ಕಾಂತಿಗೆ ಎಣ್ಣೆ ಅತ್ಯಾವಶ್ಯಕ ಅದರಂತೆ 01.04.2021 ರಿಂದ 11.04.2021 ರವರೆಗೆ ವಿಶೇಷ ರಿಯಾಯಿತಿಯಲ್ಲಿ ಅಭ್ಯಂಗ (ಮಸಾಜ್) ಕೇವಲ 1600 (4 ಜನರಿಗೆ) ನಿಮ್ಮ ಕುಟುಂಬಸ್ಥರು ಅಥವಾ ಆಯ್ದ 4 ಜನ ಸ್ನೇಹಿತರು ಸೇರಿ ಚಿಕಿತ್ಸೆ ಮಾಡಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.

**ಅನ್ವಯ ಆಯುರ್ವೇದ ಆಸ್ಪತ್ರೆ**

**ಫೋ; 08192 252228, 86186 42929**

# PUBLIC NOTICE

1) THIS IS TO INFORM GENERAL PUBLIC (INDIVIDUALS, BANKS, FINANCIAL INSTITUTIONS, TRUSTS, OR OTHERWISE) BY WAY OF THIS **CONSTRUCTIVE NOTICE** NOT TO ENTER INTO ANY TRANSACTION BY WAY OF GIFT, MORTGAGE, SALE, EXCHANGE, LEASE, SUBLET OR OTHERWISE WITH ANY THIRD PARTY CLAIMING TO BE OWNER OF **SCHEDULED PROPERTY** MENTIONED BELOW.

2) TITLE OF PROPERTY IN SUB-REGISTER STANDS IN NAME OF **ADVOCATE VINAY K DIXIT S/O KRISHNA MURTHY DIXIT GRANDSON OF SRIPADA DIXIT.**

3) VINAY K DIXIT ACQUIRED THIS PROPERTY FROM SUJAYA B DIXIT (NRI) W/O LATE BADARINATH DIXIT(NRI) SON OF SRIPADA DIXIT) (BROTHER OF KRISHNA MURTHY DIXIT & SON OF SRIPADA DIXIT).

BY GIFT DEED REGISTERED UNDER ARTICLE 28(a) UNDER KARNATAKA REGISTRATION ACT, DATED

20-03-2017 NUMBERED I19505, CD NUMBER DVGD447, IN THE OFFICE OF SUB-REGISTER DAVANAGERE.

4) KHATA AS ON DATE STANDS IN NAME OF SUJAYA B DIXIT IN DAVANAGERE CITY CORPORATION.

5) APPLICATION FOR KHATA TRANSFER IN NAME OF VINAY K DIXIT IS PENDING ON FILE OF REVENUE OFFICER DAVANAGERE CITY CORPORATION.

6) THE SCHEDULED PROPERTY IS RENTED TO M/S HOSANGADI GAS AGENCY, PROPRIETOR BASAVARAJ. M S/O HOSANGADI .M.N.

7) GENERAL PUBLIC ARE SOLELY RESPONSIBLE FOR ANY CIVIL/ CRIMINAL LIABILITY THAT MAY ARISE FROM ANY ILLEGAL TRANSACTION FROM ANY THIRD PARTY CLAIMING TO BE OWNER OF SCHEDULE PROPERTY.

8) ANY TRESPASSERS OR PERSON CAUSING DAMAGE TO SCHEDULE PROPERTY WILL BE PROSECUTED IN ACCORDANCE WITH LAW.

9) HENCE THIS CONSTRUCTIVE NOTICE.

**SCHEDULED PROPERTY :** DOOR NO 710, OLD CORPORATION WARD 21, (NEW WARD NO. 24) SITE NO 50, PJ EXTENSION, CHURCH MAIN ROAD, MEASURING 40'X75' SQUARE FEET, CONSISTING OF 400 SQUARE FEET SHEET SHED GODOWN, PROPERTY IDENTIFICATION NUMBER 30-2-58-44, CITY SURVEY NUMBER 285, DAVANGERE-577 002.

**BOUNDED BY :**

**EAST :** ST THOMAS ARCHBISHOP CHURCH (SITE NO 49)

**WEST :** COMPLEX BUILDING BEARING DOOR NO 694 (SITE NO 51)

**NORTH :** CONSERVANCY

**SOUTH :** CHURCH MAIN ROAD (9TH MAIN ROAD)

***ADVOCATE VINAY K. DIXIT , PH. : 96328 26048***

RESIDING AT NO 320 DIXIT HOUSE, DIXIT STREET, KB EXTENSION, DAVANAGERE-577002.



## ಕಸಾಪ : ಡಾ. ಮಂಜುನಾಥ್ ಕುರ್ಕಿ ಅವರಿಂದ ಇಂದು ನಾಮಪತ್ರ ಸಲ್ಲಿಕೆ



ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ ಅವರು ಜಿಲ್ಲಾ ಕಸಾಪ ಅಧ್ಯಕ್ಷ ಸ್ಥಾನಕ್ಕೆ ಮತ್ತೊಂದು ಅವಧಿಗೆ ಆಯ್ಕೆ ಬಯಸಿ ಇಂದು ಮಧ್ಯಾಹ್ನ 12 ಗಂಟೆಗೆ ತಾಲ್ಲೂಕು ಕಚೇರಿಯಲ್ಲಿ ಚುನಾವಣಾಧಿಕಾರಿಗಳಿಗೆ ನಾಮಪತ್ರ ಸಲ್ಲಿಸಲಿದ್ದಾರೆ.


SBI Life INSURANCE With Us, You're Sure

Join Today as Life Mitra

Most Noble Work

(Full Time/Part Time/ Work From Home Office/Shop)

India's No. 1 Life Insurance Company

Starting Earning 25,000 to 50,000

1. ಆಕರ್ಷಕ ಹಣಗಳಿಕೆ 2. ಇನ್‌ಸೆಂಟಿವ್

3. ವಿದೇಶ ಪ್ರಯಾಣ

ಯಾರಾದರೂ ಸೇರಬಹುದು

ಲೈಫ್ & ಜನರಲ್ ಇನ್ಶೂರೆನ್ಸ್ ಏಜೆಂಟರು ಮತ್ತು ಮಾರ್ಕೆಟಿಂಗ್, ಸೇಲ್ಸ್ ಎಕ್ಸಿಕ್ಯೂಟಿವ್, ಖಾಸಗಿ ಉದ್ಯೋಗಿಗಳು ಹಾಗೂ ನಿರುದ್ಯೋಗಿಗಳು, ಬ್ಯಾಂಕ್ ಎಕ್ಸಿಕ್ಯೂಟಿವ್, ಚಿಟ್ಸ್ ಏಜೆಂಟರು, ಗೃಹಿಣಿಯರು, ವಿದ್ಯಾರ್ಥಿಗಳು, ಹಿರಿಯ ನಿವೃತ್ತರು, ರಿಯಲ್ ಎಸ್ಟೇಟ್ ಏಜೆಂಟರು ಅಥವಾ ಯಾರಾದರೂ ಸೇರಬಹುದು.

K.M. Shivaprasad, Senior Business Manager
SBI Life Insurance Co. Ltd
Mobi: 9916013940



ಸೇಲ್ಸ್ ಬಾಯ್ಸ್ । ಸೇಲ್ಸ್ ಗರ್ಲ್ಸ್

ಬೇಕಾಗಿದ್ದಾರೆ

Demo Sales & Marketing

ಡೆಮೊ ಸೇಲ್ಸ್ & ಮಾರ್ಕೆಟಿಂಗ್ ಮಾಡಲು

ಪುರುಷ/ಮಹಿಳೆಯರು ಬೇಕಾಗಿದ್ದಾರೆ

ವಿದ್ಯಾರ್ಹತೆ : SSLC/PUC ಪಾಸ್/ಫೇಲ್

Attractive Salary+Incentive




MAHARAJ

ನೇರ ಸಂದರ್ಶನ 01.04.2021

ಬೆಳಿಗ್ಗೆ 11.00 ಗಂಟೆಯಿಂದ

ಮಹಾರಾಜ್ ಸೋಪ್ಸ್ ಇಂಡಸ್ಟ್ರಿ ಪ್ರೈ.ಲಿ.,

ಲೋಕಿಕೆರೆ ಮುಖ್ಯರಸ್ತೆ, ಇಂಡಸ್ಟ್ರೀಯಲ್ ಏರಿಯಾದ ಹತ್ತಿರ, ದಾವಣಗೆರೆ.

88842 34181, 89041 33276





# ಹೃತ್ಪೂರ್ವಕ ಕೃತಜ್ಞತೆಗಳು

ದಿನಾಂಕ 29.03.2021 ರಂದು ನಡೆದ ದಾವಣಗೆರೆ ಮಹಾನಗರಪಾಲಿಕೆ ಉಪ ಚುನಾವಣೆಯಲ್ಲಿ 20ನೇ ವಾರ್ಡ್ ಭಾರತ್ ಕಾಲೋನಿ ಮತ್ತು 22ನೇ ವಾರ್ಡ್‌ನ ಯಲ್ಲಮ್ಮ ನಗರಕ್ಕೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳಾಗಿ ಸ್ಪರ್ಧಿಸಿದ್ದ ನಮಗೆ ಅತ್ಯಧಿಕ ಮತಗಳನ್ನು ನೀಡಿದ ಎರಡೂ ವಾರ್ಡ್‌ಗಳ ಎಲ್ಲಾ ಮತದಾರ ಬಾಂಧವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ಚುನಾವಣೆ ಸಂದರ್ಭದಲ್ಲಿ ಸಹಕರಿಸಿದ ಕಾಂಗ್ರೆಸ್ ಪಕ್ಷದ ಎಲ್ಲಾ ಮುಖಂಡರುಗಳಿಗೂ, ಪ್ರಚಾರ ಕಾರ್ಯದಲ್ಲಿ ನಮ್ಮೊಂದಿಗೆ ಹಗಲಿರುಳು ಶ್ರಮಿಸಿದ ಕಾರ್ಯಕರ್ತರುಗಳಿಗೂ, ಹಿತೈಷಿಗಳಿಗೂ, ಬಂಧುಗಳಿಗೂ, ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ನಮ್ಮ ಹೃದಯಪೂರ್ವಕ ಧನ್ಯವಾದಗಳು.



**ಶ್ರೀಮತಿ ಮೀನಾಕ್ಷಿ ಜಗದೀಶ್**
ಮಹಾನಗರ ಪಾಲಿಕೆ ನೂತನ ಸದಸ್ಯರು,
20ನೇ ವಾರ್ಡ್, ಭಾರತ್ ಕಾಲೋನಿ



**ಎಸ್. ರವಿಸ್ವಾಮಿ**
ಕಾಂಗ್ರೆಸ್ ಅಭ್ಯರ್ಥಿ,
22ನೇ ವಾರ್ಡ್, ಯಲ್ಲಮ್ಮನಗರ





# ರಾಜ್ಯದ ಪ್ರಥಮ ರಾಷ್ಟ್ರೀಯ ಯೋಜನೆಯಾಗಿ ಭದ್ರಾ ಮೇಲ್ದಂಡೆ ಯೋಜನೆಗೆ ಅನುಮೋದನೆ ನೀಡಿದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಕ್ಷೇತ್ರದ ಜನತೆಯ ಪರವಾಗಿ ಕೃತಜ್ಞತೆಗಳು.



**ದಾವಣಗೆರೆ ಜಿಲ್ಲೆಯ ಬರಪೀಡಿತ ಜಗಳೂರು ತಾಲ್ಲೂಕು ಸೇರಿದಂತೆ ಚಿತ್ರದುರ್ಗ, ತುಮಕೂರು, ಚಿಕ್ಕಮಗಳೂರು ಜಿಲ್ಲೆಗಳ ಜನರಿಗೆ ವರದಾನವಾಗಿರುವ ಬಹುನಿರೀಕ್ಷಿತ ಭದ್ರಾ ಮೇಲ್ದಂಡೆ ನೀರಾವರಿ ಯೋಜನೆಗೆ ಮೊಟ್ಟ ಮೊದಲ ಬಾರಿಗೆ ರಾಜ್ಯದ ಯೋಜನೆಗೆ 'ರಾಷ್ಟ್ರೀಯ ಸ್ಥಾನಮಾನ ಕಲ್ಪಿಸಿದ' ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳಿಗೆ ಜಗಳೂರು ತಾಲ್ಲೂಕಿನ ಸಮಸ್ತ ಜನತೆಯ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.**

ಒಟ್ಟು ಯೋಜನಾ ವೆಚ್ಚ ರೂ. 21,450 ಕೋಟಿ ರೂ.ಗಳಾಗಿದ್ದು, ರಾಷ್ಟ್ರೀಯ ಯೋಜನೆ ಸ್ಥಾನಮಾನದ ಫಲವಾಗಿ ರೂ. 16,125 ಕೋಟಿ ರೂ. ಕೇಂದ್ರ ಸರ್ಕಾರ ಭರಿಸಲಿದೆ. ಜಗಳೂರು ತಾಲ್ಲೂಕಿಗೆ ಈ ಯೋಜನೆಯಡಿ ಅಂದಾಜು '1200 ಕೋಟಿ ರೂ.ಗಳು' ದೊರೆಯಲಿದೆ. 2.4 ಟಿ.ಎಂ.ಸಿ. ನೀರು ಲಭ್ಯವಾಗಲಿದೆ. ಇದರಿಂದ 45 ಸಾವಿರ ಎಕರೆಗೆ 'ಹನಿ ನೀರಾವರಿ' ಸೌಲಭ್ಯ ದೊರಕಲಿದೆ ಹಾಗೂ ತಾಲ್ಲೂಕಿನ ಅತೀ ದೊಡ್ಡ ಕೆರೆಯಾದ ಸಂಗೇನಹಳ್ಳಿ ಕೆರೆ ಸೇರಿದಂತೆ ಒಂಭತ್ತು ಕೆರೆಗಳಿಗೆ ನೀರು ತುಂಬಿಸಲಾಗುವುದು. ಇದರಿಂದ ತಾಲ್ಲೂಕು ಬರ ಮುಕ್ತವಾಗಲಿದ್ದು, ಬಹುದಿನಗಳ ಕನಸು ನನಸಾಗಲಿದೆ. ಜನರ, ರೈತರ ಬದುಕು ಹಸನಾಗಲಿದೆ. ಈ ಮಹತ್ವದ ಯೋಜನೆಯ ಕೊಡುಗೆ ನೀಡಿದ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ಶ್ರೀ ನರೇಂದ್ರ ಮೋದಿಜೀ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪ, ಸಂಸದರಾದ ಸನ್ಮಾನ್ಯ ಶ್ರೀ ಜಿ.ಎಂ. ಸಿದ್ದೇಶ್ವರ ಹಾಗೂ ಕೇಂದ್ರ ಹಾಗೂ ರಾಜ್ಯದ ಎಲ್ಲಾ ಸಚಿವರುಗಳಿಗೆ, ಈ ಯೋಜನೆ ಜಾರಿಗೆ ನನ್ನ ಜೊತೆ ಕೈ ಜೋಡಿಸಿದ ಭದ್ರಾ ಮೇಲ್ದಂಡೆ ಯೋಜನೆ ಹೋರಾಟ ಸಮಿತಿಯ ಅಧ್ಯಕ್ಷರು ಹಾಗೂ ಎಲ್ಲಾ ಪದಾಧಿಕಾರಿಗಳಿಗೆ, ಎಲ್ಲಾ ರೈತ ಸಂಘಟನೆಗಳಿಗೆ, ಪ್ರಗತಿ ಪರ ಚಿಂತಕರಿಗೆ ಸರ್ಕಾರದ ಕಾರ್ಯದರ್ಶಿಗಳು, ನೀರಾವರಿ ಇಲಾಖೆ, ಕಾರ್ಯನಿರ್ವಾಹಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ, ಮುಖ್ಯ ಅಭಿಯಂತರರು, ಅಧೀಕ್ಷಕ ಅಭಿಯಂತರರು, ಸಹಕರಿಸಿದ ಎಲ್ಲಾ ಅಭಿಯಂತರರುಗಳಿಗೆ ಹಾಗೂ ನನ್ನ ಎಲ್ಲಾ ಹಿತೈಷಿಗಳಿಗೆ ಕ್ಷೇತ್ರದ ಜನತೆಯ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.



## ಶ್ರೀ ಎಸ್.ವಿ. ರಾಮಚಂದ್ರ

ಅಧ್ಯಕ್ಷರು, ಶ್ರೀ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಹಾಗೂ ಶಾಸಕರು, ಜಗಳೂರು ವಿಧಾನಸಭಾ ಕ್ಷೇತ್ರ.

**ಜಿ.ಎಂ. ಸಿದ್ದೇಶ್ವರ ಅಭಿಮಾನಿ ಬಳಗ, ಎಸ್.ವಿ.ಆರ್. ಅಭಿಮಾನಿ ಬಳಗ, ಜಗಳೂರು ವಿಧಾನ ಸಭಾ ಕ್ಷೇತ್ರ**


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte